ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-18 ಸಂಚಿಕೆ-9 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿ ಸಂಘದ ನೂತನ ಪದಾಧಿಕಾರಿಗಳು


ಶ್ರೀ ಮಂಜುನಾಥ ಹೆಬ್ಬಾರ್


ಶ್ರೀ ಯು. ಅರವಿಂದ ಕುಮಾರ್


ಶ್ರೀ ಬಿ. ಜಯರಾಮ ರಾವ್

ತಾ.12–8–2018ರಂದು ನಡೆದ ಮಹಾ ಸಭೆಯಲ್ಲಿ ಆಯ್ಕೆಯಾದ 27 ನಿರ್ದೇಶಕರ ಪ್ರಥಮ ಸಭೆಯಲ್ಲಿ 2018–21ನೇ ಸಾಲಿಗೆ ಶ್ರೀ ಮಂಜುನಾಥ ಹೆಬ್ಬಾರ್ ಅಧ್ಯಕ್ಷರಾಗಿಯೂ, ಶ್ರೀ ಯು. ಅರವಿಂದ ಕುಮಾರ್ ಕಾರ್ಯದರ್ಶಿಯಾಗಿಯೂ, ಶ್ರೀ ಬಿ. ಜಯರಾಮ ರಾವ್ ಕೋಶಾಧಿಕಾರಿಯಾಗಿಯೂ, ಶ್ರೀ ಬಿ. ಕೃಷ್ಣಮೂರ್ತಿ ರಾವ್ ಮತ್ತು ಡಾ। ವೈ. ಸುದರ್ಶನ್ ರಾವ್ ಉಪಾಧ್ಯಕ್ಷರಾಗಿಯೂ ಹಾಗೂ ಶ್ರೀ ಐ. ಕೆ. ಜಯಚಂದ್ರ ಮತ್ತು ಶ್ರೀ ಪ್ರಭಾಕರ ಭಂಡಿ ಜತೆ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು.

ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರು ಕಬ್ಬಿನಾಲೆ ಕುಚ್ಚೂರು ಕೃಷ್ಣಹೆಬ್ಬಾರ್ ಮತ್ತು ಶ್ರೀಮತಿ ಪದ್ಮಾವತಿ ದಂಪತಿಗಳ ಪುತ್ರ. ಇವರು ವಾಣಿಜ್ಯ ಪದವೀಧರರಾಗಿದ್ದು, ವಿದ್ಯಾಭ್ಯಾಸದ ನಂತರ 12 ವರ್ಷ ಗೋಲ್ಡ್‌ಸ್ಮಿತ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದರು. ಮುಂದೆ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದು 'ಹೆಬ್ಬಾರ್ ಎಂಟರ್ ಪ್ರೈಸಸ್' ಎಂಬ ಕ್ಯಾಟರಿಂಗ್ ಸಂಸ್ಥೆಯ ಮೂಲಕ ಉಡುಪಿಯ ಆಸುಪಾಸಿನಲ್ಲಿ ಪರಿಚಿತರಾಗಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರಿಯ ಕಾರ್ಯಕರ್ತರಾಗಿ ಸಂಘದ ಪ್ರಾಥಮಿಕ ಶಿಕ್ಷಾವರ್ಗದ ತರಬೇತಿಯನ್ನು ಪಡೆದಿರುತ್ತಾರೆ. ಉಡುಪಿ ನಗರ ಬಿಜೆಪಿಯ ಕುಂಜಿಬೆಟ್ಟು ವಾರ್ಡಿನ ಅಧ್ಯಕ್ಷರಾಗಿದ್ದಾರೆ. ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಅನೇಕ ವರ್ಷಗಳಿಂದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಪತ್ನಿ ಶ್ರೀಮತಿ ರಜನಿಯವರು ಉಡುಪಿ ನಗರ ಬಿಜೆಪಿಯ ಮಹಿಳಾ ಮೋರ್ಚಾದ ಅಧ್ಯಕ್ಷರಾಗಿದ್ದು 2018ರ ಉಡುಪಿ ನಗರ ಸಭೆಯ ಚುನಾವಣೆಗೆ ಒಳಕಾಡು ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು ಬಹುಮತದಿಂದ ಆಯ್ಕೆಗೊಂಡಿದ್ದಾರೆ. ಪುತ್ರಿ ಕು। ವೈಷ್ಣವಿ ಎರಡನೇ ವರ್ಷದ ವಾಣಿಜ್ಯ ಪದವಿಯನ್ನು ಓದುತ್ತಿದ್ದಾಳೆ. ಶ್ರೀಯುತರು ನಮ್ಮ ಸಂಘದಲ್ಲಿ ಯುವ ವಿಭಾಗದ ಸಕ್ರಿಯ ಕಾರ್ಯಕರ್ತರಾಗಿ, ಅದರ ಅಧ್ಯಕ್ಷರಾಗಿ, ಅನೇಕ ವರ್ಷಗಳಿಂದ ಸಂಘದ ನಿರ್ದೇಶಕರಾಗಿ, ಜತೆ ಕಾರ್ಯದರ್ಶಿಯಾಗಿಯೂ ಈ ಹಿಂದೆ ಸೇವೆ ಸಲ್ಲಿಸಿದ್ದಾರೆ.

ಕಾರ್ಯದರ್ಶಿಗಳಾದ ಶ್ರೀ ಯು. ಅರವಿಂದ್ ಕುಮಾರ್ ಕಾಪು ದಿ। ಕುಮಾರಸ್ವಾಮಿ ಮತ್ತು ಶ್ರೀಮತಿ ಶ್ಯಾಮಲಾ ದಂಪತಿಗಳ ಪುತ್ರರು. ಇವರು ವಿಜ್ಞಾನ ಪದವೀಧರರಾಗಿದ್ದು, ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಉದ್ಯೋಗಿ. ಮಣಿಪಾಲ ಜೇಸೀಸ್ ಮತ್ತು ಜಯಂಟ್ಸ್ ಇಂಟರ್‌ನೇಶನಲ್ ಸಂಸ್ಥೆಗಳ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಸ್ಥಾಪಕ ಪ್ರವರ್ತಕರು. ಪ್ರಕೃತ ಅದರ ಉಪಾಧ್ಯಕ್ಷರಾಗಿದ್ದಾರೆ. ಉಡುಪಿಯ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರ ಕೂಟದ ಸದಸ್ಯ. ಈ ಹಿಂದೆ ಯುವ ವೇದಿಕೆಯ ಅಧ್ಯಕ್ಷರಾಗಿ ಶ್ರೀಶಾರದಾ ಪತ್ರಿಕೆಯ ಸಂಪಾದಕರಾಗಿ, ಸಂಘದ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಪತ್ನಿ ಶ್ರೀಮತಿ ಆಶಾ ಟಿ. ಯವರು ಅಜ್ಜರಕಾಡು ಸರಕಾರಿ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿದ್ದಾರೆ. ಪುತ್ರ ಅನುದೀಪ್‌ಕುಮಾರ್ ಇಂಜಿನಿಯರ್ ಪದವೀಧರರಾಗಿ ಭಾರತೀಯ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಆಫೀಸರ್ ಆಗಿ ಕರ್ತವ್ಯದಲ್ಲಿದ್ದಾರೆ. ಪುತ್ರಿ ಕು। ಅನುಶ್ರೀ ನಾಲ್ಕನೇ ವರ್ಷದ ಇಂಜಿನಿಯರಿಂಗ್ ಓದುತ್ತಿದ್ದಾಳೆ.

ಕೋಶಾಧಿಕಾರಿಗಳಾದ ಶ್ರೀ ಬಿ. ಜಯರಾಮ್ ರಾವ್‌ರವರು ಉಡುಪಿಯ ಖ್ಯಾತ ಸಂಗೀತ ವಿದ್ವಾನ್ ದಿ। ಭುಜಂಗ ರಾವ್ ಹಾಗೂ ದಿ। ಶಾಂತಾಬಾಯಿ ದಂಪತಿಗಳ ಪುತ್ರರು. ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಉದ್ಯೋಗಿ. ಜಯಂಟ್ಸ್ ಉಡುಪಿ ಇದರ ಸ್ಥಾಪಕ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರು ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರು, ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮುಕ್ತೇಸರರು, ಹಲವಾರು ವರ್ಷಗಳಿಂದ ನಮ್ಮ ಸಂಘದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರ ಪತ್ನಿ ಶ್ರೀಮತಿ ವೀಣಾ ಜೆ ರಾವ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉದ್ಯೋಗಿಯಾಗಿದ್ದು ನಿವೃತ್ತರಾಗಿದ್ದಾರೆ. ಪುತ್ರ ಸೌರಭ್ ಜೆ. ರಾವ್ ಹಾಗೂ ಸೊಸೆ ಅಪೂರ್ವ ಇಂಜಿನಿಯರಿಂಗ್ ಪದವೀಧರರಾಗಿದ್ದು ಅಯರ್ಲೆಂಡ್‌ನಲ್ಲಿ ಉದ್ಯೋಗಿಗಳಾಗಿದ್ದಾರೆ.

ನೂತನವಾಗಿ ಆಯ್ಕೆಗೊಂಡ ಪದಾಧಿಕಾರಿಗಳಿಗೂ, ನಿರ್ದೇಶಕರಿಗೂ ಅಭಿನಂದನೆಗಳು.

## ನಿರ್ಗಮನ ಪದಾಧಿಕಾರಿಗಳಿಗೆ ಸನ್ಮಾನ



ಶ್ರೀ ಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕೆಲಸವು ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯಕರ್ತರ ಪ್ರತೀ ತಿಂಗಳು ನಡೆಯುವ ಸಮ್ಮಿಲನದಂತಿರುತ್ತದೆ. ಈ ತಿಂಗಳ ಅಂಚೆ ರವಾನೆ ಕಾರ್ಯಕ್ರಮವು ತಾ.15–08–2018ರಂದು ನಡೆಯಿತು. ಈ ತಿಂಗಳ ಕಾರ್ಯಕ್ರಮದಲ್ಲಿ ಸದಸ್ಯರ ಒತ್ತಾಸೆಯಂತೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಂಘವನ್ನು ಮುನ್ನಡೆಸಿದ ಶ್ರೀ ವೈ. ಭುವನೇಂದ್ರ ರಾವ್ (ನಿರ್ಗಮನ ಅಧ್ಯಕ್ಷರು), ಶ್ರೀ ಕೆ. ಸುರೇಶ ರಾವ್ (ನಿರ್ಗಮನ ಕಾರ್ಯದರ್ಶಿ) ಹಾಗೂ ಶ್ರೀ ಕೆ.ಸುಧಾಕರ ರಾಯರನ್ನು (ನಿರ್ಗಮನ ಕೋಶಾಧಿಕಾರಿ) ಸಂಘದ ನೂತನ ಪದಾಧಿಕಾರಿಗಳಾದ ಶ್ರೀ ಮಂಜುನಾಥಹೆಬ್ಬಾರ್ (ನೂತನ ಅಧ್ಯಕ್ಷರು), ಶ್ರೀ ಯು. ಅರವಿಂದ ಕುಮಾರ್ (ನೂತನ ಕಾರ್ಯದರ್ಶಿ) ಹಾಗೂ ಶ್ರೀ ಬಿ.ಜಯರಾಮ ರಾವ್ (ನೂತನ ಕೋಶಾಧಿಕಾರಿ) ಶಾಲು ಹೊದಿಸಿ ಫಲಸಮರ್ಪಿಸಿ ಸನ್ಮಾನಿಸಿದರು. ಶ್ರೀ ಪ್ರಭಾಕರ ಭಂಡಿಯವರು ಸನ್ಮಾನ ಪತ್ರವನ್ನು ವಾಚಿಸಿದರು. ಶ್ರೀ ವೈ. ಭುವನೇಂದ್ರ ರಾವ್ ಇಂದಿನ ಸನ್ಮಾನವು ಸಂಘದ ಕಾರ್ಯಕರ್ತರಿಗೆ ಸಂದ ಗೌರವವೆಂದು ನುಡಿದರು. ಶ್ರೀ ಕೆ.ಸುರೇಶ ರಾವ್ ತಮ್ಮ ಕಾರ್ಯಾವಧಿಯಲ್ಲಿ ಸಹಕಾರವಿತ್ತ ಸರ್ವರಿಗೂ ಧನ್ಯವಾದವನ್ನು ತಿಳಿಸಿದರು. ಶ್ರೀ ಕೆ.ಸುಧಾಕರ ರಾವ್ ಸಂಘದಲ್ಲಿ ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳಬೇಕಾದ ಮಹತ್ವವನ್ನು ವಿವರಿಸಿದರು. ಡಾ ವೈ.ಸುದರ್ಶನ ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು. ಅಂದಿನ ಭೋಜನದ ಪ್ರಾಯೋಜಕರಾದ ಶ್ರೀ ಜಿ.ಕೆ.ಕೋಲ್ಪೆ ದಂಪತಿಗಳನ್ನು ಅಭಿನಂದಿಸಲಾಯಿತು. ಶ್ರೀ ಕೃಷ್ಣಕುಮಾರ್ ಮಟ್ಟು ಧನ್ಯವಾದವಿತ್ತರು.



### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು,
ಉಡುಪಿ – 576 102.

### ಆಮಂತ್ರಣ

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ವಿಳಂಬಿ ನಾಮ ಸಂವತ್ಸರದ ತುಲಾ ಮಾಸ ದಿನ ೨ ಸಲುವ ಅಶ್ವಯುಜ ಶುದ□ (ದಶಮಿ) ೧೦ ಯು, ತಾ.19-10-2018ನೇ ಶುಕ್ರವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಶ್ರೀ ಯು. ಅರವಿಂದ ಕುಮಾರ್ | ಶ್ರೀ ಬಿ. ಜಯರಾಮ ರಾವ್ | ಶ್ರೀ ಮಂಜುನಾಥ ಹೆಬ್ಬಾರ್ |
| --- | --- | --- |
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ವಿ.ಸೂ : ಈ ವರ್ಷ ನವರಾತ್ರಿಯ ಪ್ರತೀದಿನ ಸಂಜೆ ಶ್ರೀಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ಕರ್ತೃಗಳಾಗಬಯಸುವವರಿಗೆ ರೂ.5000/– ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್ 9343560647 ಅಥವಾ ಮಂಟಪದ ಮ್ಯಾನೇಜರ್ 9448108920 ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

## ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ನೂತನ ಆಡಳಿತ ಮಂಡಳಿಯು ಆಯ್ಕೆಯಾಗಿದೆ. ಹೊಸ ಪದಾಧಿಕಾರಿಗಳು, ನಿರ್ದೇಶಕರು ಹೊಸ ಹೊಸ ಐಡಿಯಾಗಳೊಂದಿಗೆ ಹೊಸತನವನ್ನು ಸಂಘದಲ್ಲಿ ತುಂಬಿಸುವ ಹುಮ್ಮಸ್ಸಿನಲ್ಲಿದ್ದಾರೆ. ಆದರೆ ಯಾಕೋ ಏನೋ ಪತ್ರಿಕೆಯ ಜವಾಬ್ದಾರಿಯನ್ನು ಮಾತ್ರ ಹಳಬನಾದ ನನ್ನ ಹೆಗಲಿನಿಂದ ಇಳಿಸಿಲ್ಲ. ಏನೇ ಇರಲಿ ಈ ಪತ್ರಿಕೆಯ ಮೂಲಕ ಶ್ರೀಶಾರದೆಯ ಸೇವೆ ಇನ್ನೊಂದಷ್ಟು ಕಾಲ ಮಾಡುವ ಸದವಕಾಶ ಸಿಕ್ಕಿದ್ದಕ್ಕೆ ಖುಷಿಯಾಗಿದೆ. ನಿಮ್ಮೆಲ್ಲರ ಸಹಕಾರ ಈಗ ಅತೀ ಮುಖ್ಯವಾಗಿದೆ. ನೂತನ ಆಡಳಿತ ಮಂಡಳಿಗೆ ಶುಭ ಹಾರೈಸುತ್ತ ಈ ಮೂರು ವರ್ಷಗಳ ಕಾಲಾವಧಿಯಲ್ಲಿ ಸಂಘದ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರೀ ಶಾರದೆಯ ಕೃಪೆಗಾಗಿ ಪ್ರಾರ್ಥಿಸುತ್ತೇವೆ.

ಶ್ರೀ ಶಾರದಾ ಮಂಟಪದ ವಠಾರದ ಒಳಹೊಕ್ಕೊಡನೆಯೇ ಎದುರಾಗುವುದು ಶ್ರೀ ಶಾರದಾ ದೇವಸ್ಥಾನ. ಶೃಂಗೇರಿಯ ಜಗದ್ಗುರುಗಳಿಂದ ಪ್ರತಿಷ್ಠಾಪಿತಳಾದವಳು ಇಲ್ಲಿಯ ಶಾರದೆ. ಉಡುಪಿಯಲ್ಲಿ ನಮ್ಮದೇ ಆದ ದೇವಸ್ಥಾನವಿಲ್ಲ ಎಂಬ ಕೊರಗನ್ನು ನೀಗಿಸಿರುವುದು ಈ ದೇವಸ್ಥಾನ. ಈ ದೇವಸ್ಥಾನದಲ್ಲಿ ನಿತ್ಯಪೂಜೆಗೆ ನೇಮಕಗೊಂಡ ಅರ್ಚಕರಿದ್ದಾರೆ. ಅವರು ಕೇವಲ ಅರ್ಚಕರು ಮಾತ್ರವಲ್ಲ ಜ್ಯೋತಿಷಿಗಳೂ ಹೌದು. ದೇವಸ್ಥಾನದಲ್ಲಿ ತ್ರಿಕಾಲ ಪೂಜೆಯೊಂದಿಗೆ ಪ್ರತೀ ಸಂಜೆಯೂ ಶ್ರೀ ಶಾರದಾ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ವಾಗಲಿ, ಸೌಂದರ್ಯಲಹರಿ ಪಾರಾಯಣ ವಾಗಲಿ, ಪಠಣೆಯಾಗಲಿ ನಡೆಯುತ್ತಿರುತ್ತದೆ. ಇಲ್ಲಿ ವೇದ ಕಲಿಯಲು ಆಸಕ್ತರೊಂದಷ್ಟು ಮಂದಿ ಸೇರಿ ಸ್ವಾಧ್ಯಾಯ ತಂಡವೊಂದನ್ನು ರಚಿಸಿಕೊಂಡಿದ್ದಾರೆ. ಪ್ರತೀ ಆದಿತ್ಯವಾರ ವೇದ ಪಾರಾಯಣ ನಡೆಯುತ್ತದೆ. ಪ್ರತೀ ತಿಂಗಳು ಸಂಕಷ್ಟಿಯಂದು ಸಾಮೂಹಿಕ ಗಣಹೋಮ ನೆರವೇರುತ್ತದೆ. ಆಗಾಗ ಭಕ್ತರಿಂದ ಸೇವೆಗಳೂ ನಡೆಯುತ್ತಿದ್ದು ಸದಾ ಕಾಲ ದೇವಸ್ಥಾನದ ವಠಾರವು ಚಟುವಟಿಕೆಯಿಂದ ತುಂಬಿರುತ್ತದೆ.

ಇಷ್ಟೊಂದು ಚಟುವಟಿಕೆಗಳು ನಮ್ಮ ದೇವಸ್ಥಾನದಲ್ಲಿ ದಿನನಿತ್ಯವೂ ನಡೆಯುವುದು ಹೆಮ್ಮೆಯ ವಿಷಯವೇ ಆಗಿದ್ದರೂ ಭಕ್ತರು ದೇವಸ್ಥಾನದಲ್ಲಿ ಕಾಲಿಟ್ಟಾಗಲೆಲ್ಲಾ ಮಂತ್ರಘೋಷ, ಹೋಮಹವನಾದಿಗಳ ದೃಶ್ಯ, ಗಂಟೆ ಜಾಗಟೆಗಳ ಸದ್ದು ಕೇಳುತ್ತಿರುವಂತಹಾ ಸನ್ನಿವೇಶವು ನಮ್ಮ ದೇವಸ್ಥಾನದಲ್ಲಿ ಯಾವಾಗಲೂ ಇದ್ದರೆ ಆಗ ಅದರ ಮೆರುಗೇ ಬೇರೆ ಅಲ್ಲವೇ? ಹಾಗಿದ್ದಾಗ ಭಕ್ತನಿಗೆ ದೇವಿಯ ಸಾನಿಧ್ಯ ಅಲ್ಲೇ ಇರುವಂತೆ ಭಾಸವಾಗವು ದಿಲ್ಲವೇ? ಒಂದು ವೇಳೆ ಗಣಹೋಮ, ದುರ್ಗಾನಮಸ್ಕಾರ, ಚಂಡಿಕಾಯಾಗದಂತಹ ಹೋಮಾದಿಗಳು ನಮ್ಮ ದೇವಸ್ಥಾನದಲ್ಲಿ ನಿತ್ಯವೂ ಜರಗಿದರೆ ನಮ್ಮ ದೇವಸ್ಥಾನವು ದೇವಸ್ಥಾನದಿಂದ ಕ್ಷೇತ್ರವಾಗಿ ಮೇಲ್ದರ್ಜೆ ಗೇರುತ್ತದೆ. ನಮ್ಮ ಸಮಾಜಬಾಂಧವರು ಒಂದು ಮನೆಯವರು ವರ್ಷಕ್ಕೆ ಒಂದು ಕಾರ್ಯಕ್ರಮದಂತೆ ಯಾವುದಾದರೊಂದು ಸೇವೆಯನ್ನು ಈ ದೇವಸ್ಥಾನದಲ್ಲಿ ನಡೆಸುವುದಾಗಿ ಸಂಕಲ್ಪ ಮಾಡಿದಲ್ಲಿ ಉಡುಪಿಯಲ್ಲಿರುವ ನಮ್ಮ ಏಕೈಕ ದೇವಸ್ಥಾನವನ್ನು ಒಂದೇ ವರ್ಷದಲ್ಲಿ ಕಾರಣಿಕ ಕ್ಷೇತ್ರವನ್ನಾಗಿಸಬಹುದು. ಈಗ ನಮ್ಮ ದೇವಸ್ಥಾನದಲ್ಲಿ ರೂ.1000/– ಸೇವಾದರ ಪಾವತಿಸಿ ವರ್ಷಕ್ಕೊಂದು ದಿನದ ನಿತ್ಯಪೂಜೆ ಏರ್ಪಡಿಸಲು ಅವಕಾಶವಿದೆ. ಅದೇ ರೀತಿ ಒಂದು ಮೊತ್ತ ಪಾವತಿಸಿ ವರ್ಷಕ್ಕೊಂದು ದಿನ ಗಣಹೋಮ/ರುದ್ರಾಭಿಷೇಕ/ದುರ್ಗಾನಮಸ್ಕಾರ/ಚಂಡಿಕಾ ಹೋಮದಂತಹಾ ಸೇವೆಯನ್ನು ಮಾಡಿಸುವ ಆರ್ಥಿಕ ಶಕ್ತಿಯನ್ನು ಶ್ರೀದೇವಿಯು ಈಗಾಗಲೇ ನಮ್ಮ ಸಮಾಜಬಾಂಧವರಿಗೆ ಒದಗಿಸಿದ್ದಾಳೆ. ನಾವು ಸಂಕಲ್ಪಿಸುವುದು ಮಾತ್ರಾ ಬಾಕಿಯಾಗಿದೆ ಅಷ್ಟೆ.

ದೇವಿಯ ಸನ್ನಿಧಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಸದಾ ನಡೆಯುತ್ತಿರಬೇಕು ಎಂಬ ಮೇಲಿನ ಆಶಯಕ್ಕೆ ಪೂರಕವಾಗಿ ಈ ಬಾರಿ ನವರಾತ್ರಿಯ ಒಂಬತ್ತು ದಿನಗಳು ಹಾಗೂ ವಿಜಯದಶಮಿಯ ಹತ್ತನೇ ದಿನವೂ ಶ್ರೀ ದೇವಿಗೆ ಯಾವುದಾದರೊಂದು ಸೇವೆ ಸಮರ್ಪಿತವಾಗಬೇಕು. ನವರಾತ್ರಿಯ ದಿನಗಳಲ್ಲಿ ದೇವಸ್ಥಾನವು ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಯ ಕೇಂದ್ರವಾಗಿ ನಮ್ಮ ಸಮಾಜಬಾಂಧವರು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂಬ ಉದ್ದೇಶದಲ್ಲಿ ಈ ಒಂಬತ್ತೂ ದಿನಗಳಲ್ಲಿ ಸಂಜೆ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಿದೆ. ನಮ್ಮ ಸಮಾಜಬಾಂಧವರಿಗೆ ನಿಗದಿತ ಸೇವಾದರ (ರೂ.5000/–) ಪಾವತಿಸಿ ಈ ಸೇವೆಯಲ್ಲಿ ಭಾಗಿಗಳಾಗುವ ಅವಕಾಶವನ್ನು ಆಡಳಿತ ಮಂಡಳಿ ನೀಡಿದೆ. ಅದರಂತೆ ನವರಾತ್ರಿಯ ಪ್ರತೀದಿನ ಸಂಜೆ ಐದು ಗಂಟೆಗೆ ಮಂಡಲ ರಚನೆಯೊಂದಿಗೆ ದುರ್ಗಾನಮಸ್ಕಾರ ಪೂಜೆ ಆರಂಭಗೊಂಡು ರಾತ್ರಿ ಎಂಟುಗಂಟೆಗೆ ಮಹಾಪೂಜೆ ಹಾಗೂ ಭೋಜನ ಪ್ರಸಾದದೊಂದಿಗೆ ಕೊನೆಗೊಳ್ಳಲಿದೆ. ಈ ಕಾರ್ಯಕ್ರಮಕ್ಕೆ ಬೇಕಾಗುವ ವೈದಿಕರು, ಪೂಜಾ ಸಾಮಗ್ರಿ ಹಾಗೂ ಭೋಜನದ ಸಕಲ ವ್ಯವಸ್ಥೆಯನ್ನು ಸಂಘವೇ ಏರ್ಪಾಡು ಮಾಡಲಿದೆ. ಸಮಾಜ ಬಾಂಧವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಹೆಚ್ಚಿನಸಂಖ್ಯೆಯಲ್ಲಿ ಸೇವಾದಾರರಾಗಿ ಈ ಸೇವೆಯಲ್ಲಿ ಭಾಗಿಗಳಾಗಿ ನವರಾತ್ರಿಯ ಕಳೆಯನ್ನು ಇನ್ನಷ್ಟು ಹೆಚ್ಚಿಸಬೇಕಾಗಿ ವಿನಂತಿ. ಈ ಹೊಸ ಕಾರ್ಯಕ್ರಮಕ್ಕೆ ಸಮಾಜ ಬಾಂಧವರು ಮುಕ್ತಮನಸ್ಸಿನಿಂದ ಬೆಂಬಲವಿತ್ತಲ್ಲಿ ಈಗ ಜರಗುವ ನಿತ್ಯಪೂಜೆಯಂತೆ "ನಿತ್ಯಹೋಮ" ಕಾರ್ಯಕ್ರಮವನ್ನು ಸಂಘವು ಹಮ್ಮಿಕೊಳ್ಳಲು ಈ ನವರಾತ್ರಿಯು ಮುನ್ನುಡಿಯಾಗಲಿಕ್ಕಿಲ್ಲವೇ?


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಬಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436

**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66, ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ

PADUBIDRI 18 KMs
(20KMs from HEJMADY TOLL)
VRINDAVAN NEST
NH-66
KAUP 5 KMs
KATAPADY 1 KM
UDUPI 6 KMs
SCAN QR CODE TO LOCATE US ON GOOGLE

ಆದರದ ಸ್ವಾಗತ ಬಯಸುವ

ಹೋಟೇಲ್ ವೃಂದಾವನ – ಕದ್ರಿ, ಮಂಗಳೂರು
ವಿನೀತ್ ಮೆಡಿಕಲ್ಸ್ – ಪಡುಬಿದ್ರಿ
ವಿಶ್ವ ಟ್ರಾನ್ಸ್‌ಪೋರ್ಟ್ – ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್ – ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

## ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ  ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.10-10-2018ರಿಂದ 18-10-2018ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ಸಂಜೆ ದುರ್ಗಾನಮಸ್ಕಾರ ಮತ್ತು ರಾತ್ರಿ ಗಂಟೆ 8-00ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ನವರಾತ್ರಿಯ ಒಂಭತ್ತು ದಿನವೂ ಸಂಜೆ 7-00ರಿಂದ 8-00ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.19-10-2018ನೇ ಶುಕ್ರವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | | ಅವಧಿ |
|---|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-8ನೇ ತರಗತಿಯವರೆಗೆ (ನಮ್ಮೂರ ಜಾತ್ರೆ) | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಪ್ರಕೃತಿ ವಿಕೋಪ) | | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | | |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (4 ಶ್ಲೋಕ) | 5-8ನೇ ತರಗತಿಯವರೆಗೆ (4 ಶ್ಲೋಕ) | 9ನೇ ತರಗತಿಯಿಂದ ಮೇಲ್ಪಟ್ಟು ಪದವಿಪೂರ್ವ ತರಗತಿಯವರೆಗೆ (4 ಶ್ಲೋಕ) | ದೊಡ್ಡವರಿಗೆ (8 ಶ್ಲೋಕ) | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | | |
| **ಕನಕಾಧಾರ ಸ್ತೋತ್ರ** | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | | |

ವಿಶೇಷ ಸೂಚನೆಗಳು :

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

2-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ, ವಿದ್ಯಾರ್ಥಿವೇತನ ವಿತರಣೆ ಮತ್ತು ಮಹಿಳಾ ವೇದಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು.

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಮಕ್ಕಳ ಯಕ್ಷಗಾನ : ‘‘ವೀರ ವೃಷಸೇನ’’ ಹಾಗೂ ಹಿರಿಯ ಕಲಾವಿದರಿಂದ ‘‘ಚಿತ್ರಾಕ್ಷಿ ಕಲ್ಯಾಣ’’ ಸಮಯ: ಸಂಜೆ 5-00ರಿಂದ**

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ

## (ಅಧ್ಯಾಯ – 15) ಪುರುಷೋತ್ತಮ ಪ್ರಾಪ್ತಿಯೋಗ – ಕಂಠಪಾಠಕ್ಕೆ

ಊರ್ಧ್ವಮೂಲಮಧಃಶಾಖಮ್ ಔ
ಅಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ
ಯಸ್ತಂ ವೇದ ಸ ವೇದವಿತ್ ॥ ೧ ॥

ಅಧಶ್ಚೋರ್ಧ್ವಂಪ್ರಸೃತಾಸ್ತಸ್ಯಶಾಖಾಃ
ಗುಣ ಪ್ರವೃದ್ಧಾವಿಷಯ ಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ
ಕರ್ಮಾನು ಬಂಧೀನಿ ಮನುಷ್ಯ ಲೋಕೇ ॥ ೨ ॥

ನ ರೂಪಮಸ್ಯೇಹ ತಥೋಪಲಭ್ಯತೇ
ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲಮ್
ಅಸಂಗಶಸ್ತ್ರೇಣ ಧೃಢೇನ ಛಿತ್ವಾ ॥ ೩ ॥

ತತಃ ಪದಂ ತತ್ಪರಿಮಾರ್ಗಿತವ್ಯಮ್
ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ
ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥ ೪ ॥


ನಿರ್ಮಾನ ಮೋಹಾ ಜಿತಸಂಗದೋಷಾಃ
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖ ಸಂಜ್ಞೈಃ
ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥ ೫ ॥

ನ ತದ್ಭಾಸಯತೇ ಸೂರ್ಯೋ
ನ ಶಶಾಂಕೋ ನ ಪಾವಕಃ ।
ಯದ್ಗತ್ವಾನ ನಿವರ್ತಂತೇ
ತದ್ಧಾಮ ಪರಮಂ ಮಮ ॥ ೬ ॥

ಮಮೈವಾಂಶೋ ಜೀವಲೋಕೇ
ಜೀವಭೂತಸ್ಸನಾತನಃ ।
ಮನಷ್ಷಷ್ಠಾನೀಂದ್ರೀಯಾಣಿ
ಪ್ರಕೃತಿಸ್ಥಾನಿ ಕರ್ಷತಿ ॥ ೭ ॥

ಶರೀರಂ ಯದವಾಪ್ನೋತಿ
ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ
ವಾಯುರ್ಗಂಧಾನಿವಾಶಯಾತ್ ॥ ೮ ॥


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು
**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997    E-mail : laxmiprasad5010@gmail.com






**RAJESH POWER PRESS**
**PRINTERS & PUBLISHERS**
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶೆಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



*With Best Complimemts From*
SRI M. SHAILESH RAO    Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

## ಪೊಳಲಿಯಲ್ಲಿ ನಾಗರ ಪಂಚಮಿ



ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನ ಪೊಳಲಿಯಲ್ಲಿರುವ ನಿವೇಶನದ ನಾಗದೇವರ ಗುಡಿಯಲ್ಲಿ ಸಂಘದ ವತಿಯಿಂದ ನಾಗರಪಂಚಮಿಯಂದು ತನುಸೇವೆ ನೆರವೇರಿತು

## ಪಡುಬಿದ್ರೆಯಲ್ಲಿ ಸೋಣಡೊಂಜಿ ದಿನ



ಶ್ರೀಮತಿ ವಿಮಲ ದಾಮೋದರ್ ರಾವ್, ಶ್ರೀಮತಿ ಶಾಂತಸದಾಶಿವ ರಾವ್, ಶ್ರೀಮತಿ ರತ್ನಾ ಗಂಗಾಧರ್ ರಾವ್, ಶ್ರೀಮತಿ ಸುಶೀಲ ಗಣೇಶ್ ರಾವ್, ಶ್ರೀಮತಿ ವಾರಿಜಮ್ಮರವರಿಗೆ ಸನ್ಮಾನದ ಕ್ಷಣಗಳು

## ಕಾಮಾಕ್ಷಿ ದೇಗುಲದಲ್ಲಿ ಮಹಿಳಾವೇದಿಕೆಯಿಂದ ಭಜನೆ



ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತೀ ದಿನ ಭಜನಾ ಕಾರ್ಯಕ್ರಮವನ್ನು ನಡೆಸುವ ಶ್ರೀ ಶಾರದಾ ಭಜನಾಮಂಡಳಿಯು ತನ್ನ ವ್ಯಾಪ್ತಿಯನ್ನು ಸುತ್ತಮುತ್ತಲಿನ ದೇವಸ್ಥಾನಗಳಿಗೂ ವಿಸ್ತರಿಸಿ ಭಜನಾ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದೆ. ಇತ್ತೀಚಿಗೆ ಪೊಳಲಿ ರಾಜರಾಜೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಂದರ್ಭದಲ್ಲಿ ಅಲ್ಲಿಯೂ ಭಜನಾ ಕಾರ್ಯಕ್ರಮ ನಡೆಸಿಕೊಟ್ಟಿತ್ತು. ಈ ತಂಡದಲ್ಲಿ ನಮ್ಮ ಮಹಿಳಾವೇದಿಕೆಯ ಹಿರಿಯ ಹಾಗೂ ಕಿರಿಯ ಸದಸ್ಯೆಯರು ಹಾಗೂ ಪರಿಸರದ ಭಕ್ತೆಯರು ಇದ್ದಾರೆ. ಅವರು ಹಾಡುವ ಭಜನೆಗಳಲ್ಲಿ ಹಲವಾರು ಅಪರೂಪದ ಹಾಗೂ ಸುಂದರವಾದ ಭಜನೆಗಳಿವೆ. ಅವನ್ನು ಸಂಗ್ರಹಿಸಿ ಉಪಾಸನಾ ಮಂಜರಿ–2 ಎಂಬ ಪುಸ್ತಕವನ್ನು ಸಂಘವು ಮುದ್ರಿಸಿಕೊಟ್ಟಿದೆ. ಈ ಪುಸ್ತಕವು ಸಂಘದ ಕಛೇರಿಯಲ್ಲಿ ಲಭ್ಯವಿದೆ. ದಿನಾಂಕ 15–08–2018ರಂದು ನಮ್ಮ ಭಜನಾ ತಂಡವು ಇಂದ್ರಾಳಿಯ ಪ್ರಸಿದ್ಧ ಕಾಮಾಕ್ಷಿ ದೇಗುಲದಲ್ಲಿ ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟಿತು. ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಕೆ. ಸುರೇಶ ರಾಯರು ತಂಡದೊಂದಿಗೆ ಭಾಗವಹಿಸಿದರು. ದೇವಳದ ಅರ್ಚಕರು ಹಾಗೂ ಮೊಕ್ತೇಸರರು ಭಜನಾತಂಡಕ್ಕೆ ಫಲಪ್ರಸಾದವಿತ್ತು ಶುಭಹಾರೈಸಿದರು

## ಎ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ

ಮಹಾರಾಷ್ಟ್ರದ ಮುಂಬೈಯಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಕಿಶೋರ್‌ರಾವ್ ಮತ್ತು ಶ್ರೀಮತಿ ವಸುಮತಿ ರಾವ್ ದಂಪತಿಗಳು ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಇದರ ಆಶ್ರಯದಲ್ಲಿರುವ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿಗೆ ಧನಸಹಾಯ ಮಾಡಿರುತ್ತಾರೆ. ಈ ಹಿಂದೆಯೂ ಅವರು ಸಂಘದ ಶ್ರೀ ಶಾರದಾ ಪತ್ರಿಕೆಯ ಮಹಾ ಪೋಷಕರಾಗಿ ಸಹಕರಿಸಿದ್ದನ್ನು ಸ್ಮರಿಸುತ್ತಾ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

## ಬೆಳ್ತಂಗಡಿಯಲ್ಲಿ ಋುಗುಪಾಕರ್ಮ



ತಾ.25–08–2018ರಂದು ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾದ ವತಿಯಿಂದ ಲಾಯಿಲದಲ್ಲಿನ ಸಭಾಭವನದಲ್ಲಿ ಋುಗುಪಾಕರ್ಮವನ್ನು ಆಚರಿಸಲಾಯಿತು. ಸುಮಾರು 60ಜನ ಸಮಾಜಬಾಂಧವರು ಭಾಗವಹಿಸಿ ನೂತನ ಯಜ್ಞೋಪವೀತ ಧಾರಣೆ ಮಾಡಿದರು

## ಪಡುಬಿದ್ರೆಯಲ್ಲಿ ಋುಗುಪಾಕರ್ಮ

ತಾ.25–08–2018ರಂದು ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ಶ್ರೀಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಸಭಾಭವನದಲ್ಲಿ ಋುಗುಪಾಕರ್ಮವನ್ನು ಆಚರಿಸಲಾಯಿತು. ಸುಮಾರು 60 ಜನ ಸಮಾಜಬಾಂಧವರು ಭಾಗವಹಿಸಿ ನೂತನ ಯಜ್ಞೋಪವೀತ ಧಾರಣೆ ಮಾಡಿದರು. ಶ್ರೀ ಶ್ರೀನಿವಾಸ ಶರ್ಮರ ಮುತುವರ್ಜಿಯಲ್ಲಿ ಈ ಕಾರ್ಯಕ್ರಮ ನೆರವೇರಿತು

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಉಪಾಕರ್ಮ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.25–08–2018ರಂದು ಉಪಾಕರ್ಮವನ್ನು ನಡೆಸಲಾಯಿತು. ಪಾವಂಜೆ ಶ್ರೀ ಜಗದೀಶ ಉಪಾಧ್ಯಾಯರು ಗಾಯತ್ರಿ ಹೋಮ ನಡೆಸಿ ವಿವಿಧ ವಿಧಿ ವಿಧಾನಗಳೊಂದಿಗೆ ಯಜ್ಞೋಪವೀತಧಾರಣೆ ನೆರವೇರಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಪಧಾದಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿ ಭಜನಾ ಕಾರ್ಯಕ್ರಮ



ಪಾವಂಜೆ ಜ್ಞಾನ ಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಹನುಮನ ಸನ್ನಿಧಿಯಲ್ಲಿ ಆಂಜನೇಯನಿಗೆ ತೈಲಾಭಿಷೇಕ ಮತ್ತು ಸನ್ನಿಧಿಯಲ್ಲಿ ರಾಮ ಸಂಕೀರ್ತನೆ ಪ್ರಯುಕ್ತ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭ ಭಜನಾ ಮಂಡಳಿಯಿಂದ ಭಜನಾ ಸೇವೆ ಜರಗಿತು. ಶ್ರೀ ಹರಿನಾರಾಯಣ ರಾವ್ ಮತ್ತು ಶ್ರೀ ಶ್ರೀಕಾಂತ ರಾವ್ ಕಾರ್ಯಕ್ರಮ ಸಂಯೋಜಿಸಿದರು.



## ಶ್ರೀಶಾರದಾ ಕ್ರೆಡಿಟ್.ಕೋ ಅಪರೇಟಿವ್ ಸೊಸ್ಶಾಟಿ (ನಿ.) ಉಡುಪಿ ವಾರ್ಷಿಕ ಮಹಾಸಭೆ




ಶ್ರೀಶಾರದಾ ಕ್ರೆಡಿಟ್.ಕೋ ಅಪರೇಟಿವ್ ಸೊಸ್ಶಾಟಿ (ನಿ.) ಉಡುಪಿ ಇದರ 2017–18ನೇ ಸಾಲಿನ ವಾರ್ಷಿಕ ಮಹಾಸಭೆಯ ತಾ.26.08.2018 ನೇ ರವಿವಾರ ಬೆಳಿಗ್ಗೆ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸೊಸ್ಶಾಟಿಯ ಅಧ್ಯಕ್ಷರಾದ ಶ್ರೀ ಕೆ. ವೇಣುಗೋಪಾಲ್ ರಾವ್ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಕುಮಾರಿ ಅನನ್ಯರವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು "ಸತತವಾಗಿ 15ನೇ ವರ್ಷದಲ್ಲಿ ಲಾಭಗಳಿಸುತ್ತಾ ಬಂದಿರುವ ಸಂಸ್ಥೆ, ಹದಿನೇಳು ವರ್ಷಗಳ ಸಾರ್ಥಕ ವ್ಯವಹಾರವನ್ನು ಪೂರ್ಣಗೊಳಿಸಿ 18ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸಂಘವು ವರದಿ ಸಾಲಿನಲ್ಲಿ ಸದಸ್ಯರಿಂದ 25.16 ಲಕ್ಷ ಪಾಲು ಬಂಡವಾಳ ಹಾಗೂ ರೂ.14.73 ಕೋಟಿ ಠೇವಣಿ ಸಂಗ್ರಹಿಸಿದೆ, ಹಾಗೂ ರೂ.13.41 ಕೋಟಿ ಸಾಲ ನೀಡಿದ್ದು ರೂ.23.81 ಲಕ್ಷ ನಿವ್ವಳ ಲಾಭಗಳಿಸಿದೆ. ಪ್ರಸಕ್ತ ಸಂಘವು ರೂ.16.97 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸಂಘದ ಸದಸ್ಯರಿಗೆ 12% ಡಿವಿಡೆಂಡ್ ಘೋಷಿಸುತ್ತಿದ್ದೇವೆ ಎಂದು ಅವರು ಸಂಘದ ಅಭಿವೃದ್ಧಿಗೆ ಸಹಕರಿಸಿದ ಸದಸ್ಯ ಬಾಂಧವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

2017–2018ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ 2017–2018ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು ಕಾರ್ಯದರ್ಶಿ ಶ್ರೀ ಎನ್.ಪಟ್ಟಾಭಿರಾಮ ರಾವ್ ರವರು ಸಭೆಯ ಮುಂದಿಟ್ಟರು. ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸಭೆಯು ತನ್ನ ಅಂಗೀಕಾರವನ್ನು ನೀಡಿತು. 2017–18ನೇ ಸಾಲಿನ ನಿವ್ವಳ ಲಾಭದ ಹಂಚಿಕೆ, 2017–18ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿ, ಹೆಚ್ಚಾದ ವೆಚ್ಚಗಳ ಪಟ್ಟಿಯನ್ನು ಮಹಾಸಭೆಯು ಅಂಗೀಕರಿಸಿತು.

ವೇದಿಕೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಯು.ಅರವಿಂದ ಕುಮಾರ್ ಹಾಗೂ ನಿರ್ದೇಶಕರಾದ ಶ್ರೀ ಯು.ಪ್ರಫುಲ್ಲ ಚಂದ್ರ ರಾವ್, ಶ್ರೀ ಎಂ. ಸದಾನಂದ ರಾವ್, ಶ್ರೀ ವೈ. ಪ್ರಕಾಶ್ ಕುಮಾರ್, ಶ್ರೀ ವೈ. ಮೋಹನ್ ರಾವ್, ಶ್ರೀ ಕೆ.ಮಂಜುನಾಥ ಹೆಬ್ಬಾರ್, ಶ್ರೀ ಬಿ. ಜಯರಾಮ ರಾವ್, ಶ್ರೀ ಕೃಷ್ಣಕುಮಾರ್ ರಾವ್, ಶ್ರೀ ಕೆ.ಗಣೇಶ ರಾವ್, ಶ್ರೀ ಪ್ರಭಾಕರ ಭಂಡಿ, ಶ್ರೀಮತಿ ಪ್ರೀತಿಮಾಲಾ, ಶ್ರೀಮತಿ ಹರಿಣಿ ನಾಗರಾಜ್ ಹಾಗೂ ಉಪಾಧ್ಯಕ್ಷರಾದ ಶ್ರೀ ಬಿ. ಕೃಷ್ಣಮೂರ್ತಿ ರಾವ್ ಉಪಸ್ಥಿತರಿದ್ದರು.

ಶಾಖಾ ವ್ಯವಸ್ಥಾಪಕರಾದ ಶ್ರೀ ಕೆ. ವಿಶ್ವನಾಥ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು.

## ಕಾರ್ಕಳದಲ್ಲಿ ಆಷಾಢದಲ್ಲೊಂದು ದಿನ

ಶ್ರೀ ಶಂಕರ ಪ್ರತಿಷ್ಠಾನ (ರಿ.), ಕಾರ್ಕಳ (ಸ್ಥಾನಿಕ ಬ್ರಾಹ್ಮಣ ಸಭಾ, ಕಾರ್ಕಳ) ಇದರ ವತಿಯಿಂದ ಇತ್ತೀಚೆಗೆ 'ಆಷಾಢದಲ್ಲೊಂದು ದಿನ'ದ ಕಾರ್ಯಕ್ರಮವು ತೆಳ್ಳಾರು ರಸ್ತೆಯ ಪ್ರಸಾದ ಭವನದಲ್ಲಿ ಜರಗಿತು. ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಕೆ. ರತ್ನಾಕರ ರಾವ್‌ರವರು ಸರ್ವರನ್ನು ಸ್ವಾಗತಿಸಿದರು.

ಆಷಾಢ ಮಾಸದಲ್ಲಿ ತಯಾರಿಸುವ ವಿಶೇಷ ತಿಂಡಿಗಳಲ್ಲಿ ಅಕ್ಕಿ ಶೇವಿಗೆ, ಚಿತ್ರಾನ್ನ, ಅರಶಿಣಎಲೆ ಗಟ್ಟಿ, ಹಲಸಿನ ಹಣ್ಣಿನ ಗಟ್ಟಿ, ಮುಳ್ಳುಸೌತೆ ಹಾಲ್‌ಬಾಯಿ, ಕೆಸುವಿನಎಲೆ ಪತ್ರೊಡೆ, ರೊಟ್ಟಿ ಕೊಡ್ಲು, ಹಲಸಿನ ಹಣ್ಣಿನ ಪಾಯಸ, ಕಡ್ಲೆಬೇಳೆ ಪಾಯಸ, ಹುರುಳಿಸಾರು, ಹುರುಳಿ ಚಟ್ನಿ, ಅಕ್ಕಿ ಕಡುಬು, ಹಾಗಲಕಾಯಿ ಬೀಜದ ಚಟ್ನಿ, ತೊಗಟೆ ಸೊಪ್ಪಿನ ವಡೆ, ಹಲಸಿನ ಬೀಜದ ವಡೆ, ಮುಳ್ಕ, ಹಲಸಿನ ಹಣ್ಣಿನ ಹಲ್ವ, ಅಡ್ಕಬಾಳೆ ಮೆಣಸ್‌ಕಾಯಿ, ಹಲಸಿನಸೋಳೆ ಪಲ್ಯ, ಗೆಣಸಿನ ಸೊಪ್ಪಿನ ಗಟ್ಟಿ, ಉಂಡ್ಲುಗ, ಅತಿರಸ, ಚಕ್ಕುಲಿ, ಹಲಸಿನ ಹಪ್ಪಳ, ನೆಲ್ಲಿಚಟ್ನಿ, ಒಂದೆಲಗ ಚಟ್ನಿ ಹೀಗೆ ಮೂವತ್ತೆಂಟು ಬಗೆಯ ತಿಂಡಿಗಳನ್ನು ತಯಾರಿಸಿಕೊಂಡು ಬಂದು ಒಂದಾಗಿ ಸವಿದು ಹೊಟ್ಟೆ ಮತ್ತು ಮನಸ್ಸನ್ನು ತಣಿಸಿಕೊಂಡರು.

ತುಳುನಾಡಿನಲ್ಲಿ ಪ್ರಸಿದ್ಧಿ ಪಡೆದ ಈ ತಿಂಡಿ ತಿನಿಸುಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ತಿಂಡಿ ತಯಾರಿಸಿಕೊಂಡು ಬಂದ ಎಲ್ಲ ಸದಸ್ಯೆಯರಿಗೆ ಕೃತಜ್ಞತೆಯನ್ನು ಸಂಘದ ಕಾರ್ಯದರ್ಶಿ ಅನಿಲ್ ಕುಮಾರ್ ಕೆಮ್ಮಣ್ಣು ನೀಡಿದರು. ಬಳಿಕ ಕೆಲವೊಂದು ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ನೀಡಲಾಯಿತು. ಸ್ಪರ್ಧೆಗಳನ್ನು ಕೋದಂಡರಾಮ ರಾವ್ ನೆರವೇರಿಸಿಕೊಟ್ಟರು. ಯಶಸ್ಸಿಗೆ ಸಹಕರಿಸಿದ ವರನ್ನು ಅಧ್ಯಕ್ಷರು ಅಭಿನಂದಿಸಿದರು. ಶ್ರೀಮತಿ ವಸಂತಿ ಡಿ. ರಾವ್ ಬಹುಮಾನವನ್ನು ಪ್ರಾಯೋಜಿಸಿದ್ದರು.

## ಪ್ರೊ. ಕೆ ರಾಮಮೂರ್ತಿ ರಾವ್ ಅವರಿಗೆ ಪ್ರತಿಷ್ಠಿತ 'ಸ್ಕಾಲರ್‌ಲಿ ಅಚೀವರ್' ಪ್ರಶಸ್ತಿ



ಮೈಸೂರಿನಲ್ಲಿ ನೆಲೆಸಿರುವ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್ ಅವರಿಗೆ 'ದಿ ಡಾನ್ಸ್ ಇಂಡಿಯಾ' ಎಂಬ ರಾಷ್ಟ್ರೀಯ ನೃತ್ಯ ಮಾಸಪತ್ರಿಕೆ ತನ್ನ ಎರಡನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ "ಸ್ಕಾಲರ್‌ಲಿ ಅಚೀವರ್" ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ.

'ದಿ ಡಾನ್ಸ್ ಇಂಡಿಯಾ' ಸಂಸ್ಥೆ ಹಾಗೂ ದಿ ಫೆಡರೇಷನ್ ಆಫ್ ಕ್ಲಾಸಿಕಲ್ ಡಾನ್ಸರ್ಸ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಕರ್ನಾಟಕ ನೈಪುಣ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶ್ರೀ ಮುರಳೀಧರ ಹಾಲಪ್ಪನವರು ಈ ಪ್ರಶಸ್ತಿ ಪ್ರಧಾನ ಮಾಡಿದರು. ಸಮಾರಂಭದಲ್ಲಿ ಫೆಡರೇಷನ್ನಿನ ಅಧ್ಯಕ್ಷ ವಿದ್ವಾನ್ ಸಾಯಿವೆಂಕಟೇಶ, ಕಿರುತೆರೆ ನಟ ಸೂರಿ ಮುಂತಾದವರು ಹಾಜರಿದ್ದರು.

ಕಳೆದ ನಲವತ್ತು ವರ್ಷಗಳಿಂದ ನಾಡಿನ ಶಾಸ್ತ್ರೀಯ ನೃತ್ಯ ಕ್ಷೇತ್ರದಲ್ಲಿ ಚಿರಪರಿಚಿತರಾಗಿರುವ ಪ್ರೊ. ಕೆ.ರಾಮಮೂರ್ತಿ ರಾವ್ ಅವರು ನೃತ್ಯ ಗುರುವಾಗಿ, ಸಂಘಟಕರಾಗಿ, ಬರಹಗಾರರಾಗಿ, ವಿಮರ್ಶಕರಾಗಿ ಈ ಕ್ಷೇತ್ರಕ್ಕೆ ಸಲ್ಲಿಸುತ್ತ ಬಂದಿರುವ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಗಾಗಿ ಇವರನ್ನು ದಿ ಫೆಡರೇಷನ್ ಆಫ್ ಕ್ಲಾಸಿಕಲ್ ಡಾನ್ಸರ್ಸ್ ಸಂಸ್ಥೆ ಆಯ್ಕೆ ಮಾಡಿದ್ದು ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ನೃತ್ಯ ಕಲಾವಿದರ ಸಮ್ಮುಖದಲ್ಲಿ ಅವರನ್ನು ಶಾಲು ಹೊದಿಸಿ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಕೆ.ರಾಮಮೂರ್ತಿರಾವ್ ಅವರಿಗೆ 2005–06ರ ಸಾಲಿನಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಗೌರವ ಪ್ರಶಸ್ತಿ, ವಿವಿಧ ಸಂಘ ಸಂಸ್ಥೆಗಳಿಂದ, ಗುಣನಿಧಿ, ನೃತ್ಯಭೂಷಣ, ಆದರ್ಶಸೇವಾರತ್ನ, ನೃತ್ಯ ದೀಪ್ತಿ ಮುಂತಾದ ಹಲವಾರು ಪ್ರಶಸ್ತಿಗಳು ಈಗಾಗಲೇ ಲಭಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

## ನಗರಸಭೆಯ ಸದಸ್ಯರಾಗಿ ಆಗಿ ಶ್ರೀಮತಿ ರಜನಿ ಹೆಬ್ಬಾರ್



ಇವರು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರ ಪತ್ನಿ ಹಾಗೂ ನಮ್ಮ ಸಂಘದ ನಿರ್ದೇಶಕಿ. ಶ್ರೀ ಜಿ.ಕೆ. ಕೋಲ್ವೆ ಹಾಗೂ ಶ್ರೀಮತಿ ಯಶೋದಾರವರ ಪುತ್ರಿಯಾದ ಶ್ರೀಮತಿ ಕೆ. ರಜನಿ ಹೆಬ್ಬಾರ್‌ರವರು ನಗರಸಭಾ ಸದಸ್ಯೆಯಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಗೃಹಿಣಿ ಯಾಗಿದ್ದರೂ ಸಮಾಜ ಸೇವೆಯಲ್ಲಿ ಅದರಲ್ಲೂ ರಾಜಕೀಯದಲ್ಲಿ ಮಹಿಳೆಯಾಗಿ ಆಸಕ್ತಿ ತಾಳಿರುವುದು ಇವರ ವಿಶೇಷತೆ. ಶ್ರೀಮತಿ ರಜನಿ ಹೆಬ್ಬಾರ್ ಸ್ವತಃ ರಾಜಕೀಯದಲ್ಲಿ ಆಸಕ್ತಿ ಉಳ್ಳವರು. ಭಾರತೀಯ ಜನತಾ ಪಕ್ಷದಲ್ಲಿ ಬಹಳ ವರ್ಷಗಳಿಂದ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ಮಹಿಳೆಯರನ್ನು ಸಂಘಟಿಸುವುದರಲ್ಲಿ ಇವರ ಕ್ಷಮತೆಯನ್ನು ಮನಗಂಡು ಪಕ್ಷವು ಇವರನ್ನು ಉಡುಪಿ ನಗರದ ಮಹಿಳಾ ಮೋರ್ಚಾದ ಅಧ್ಯಕ್ಷೆಯನ್ನಾಗಿ ಕಳೆದ ವರ್ಷವೇ ನೇಮಿಸಿತ್ತು. ಇದೀಗ ಅವರು ಉಡುಪಿ ನಗರಸಭೆಗೆ ನಡೆದ ಚುನಾವಣೆಯಲ್ಲಿ ಒಳಕಾಡು ವಾರ್ಡಿಗೆ ತನ್ನ ಮೊದಲ ಚುನಾವಣೆಯಲ್ಲೇ ದಾಖಲೆ ಮತದ ಜಯವನ್ನು ದಾಖಲಿಸಿದ್ದಾರೆ. ಹೀಗೆ ರಾಜಕಾರಣದಲ್ಲಿ ತನ್ನ ಪ್ರವೇಶದ ಮೊದಲ ಪ್ರಯತ್ನದಲ್ಲೇ ಯಶಸ್ಸು ಕಂಡಿರುವ ಶ್ರೀಮತಿ ರಜನಿ ಹೆಬ್ಬಾರ್‌ರವರ ರಾಜಕೀಯ ಭವಿಷ್ಯವು ಉಜ್ವಲವಾಗಲಿ ಹಾಗೂ ಜನರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.


SAMPATH KUMAR Mobile : 9741508881

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

With Best Compliments From :

Ph : 98459 92859

Ganesh Hebbar & Associates

CHARTERED ACCOUNTANT

S.M.S.P. Complex, Udupi - 576 101.

Buying and selling shares as easy as checking your emails

Sharekhan Online Trading Account Features:

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan YOUR GUIDE TO THE FINANCIAL JUNGLE

Visit : www.sharekhan.com

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ.), ಸುರತ್ಕಲ್ "ಆಟಿಡೊಂಜಿ ದಿನ"




ದಿನಾಂಕ 29-07-2018ನೇ ರವಿವಾರ ಗೋವಿಂದ ದಾಸ ಕಾಲೇಜು, ಸುರತ್ಕಲ್ ಇದರ ಎದುರುಗಡೆ ಇರುವ ನಳಂದಾ ಸಂಕೀರ್ಣದ ಹಿಂಭಾಗದಲ್ಲಿನ ಮಾನಸ ಕಟ್ಟಡದ "ವಿವೇಕಾನಂದ ಸಭಾಗೃಹ"ದಲ್ಲಿ ಬೆಳಿಗ್ಗೆ ಗಂಟೆ 10.30ಕ್ಕೆ ಸರಿಯಾಗಿ ಸುರತ್ಕಲ್ ಸಂಘದ ವತಿಯಿಂದ "ಆಟಿಡೊಂಜಿ ದಿನ" ಕಾರ್ಯಕ್ರಮವು ನಡೆಯಿತು. ಸಭೆಯಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿ ಶಂಕರ ರಾವ್, ಅಧ್ಯಕ್ಷರಾದ ಶ್ರೀ ಮಾಧವ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್ ಹಾಗೂ ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮಾ, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಸಂಕೇತ್ ಶಾನುಭೋಗ್, ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಮೋಹನ್ ರಾವ್ ಹಾಗೂ ಗೌರವಾಧ್ಯಕ್ಷರಾದ ಶ್ರೀ ವಾಸುದೇವ ರಾವ್ ಉಪಸ್ಥಿತರಿದ್ದರು. ಹಿರಿಯ ಸದಸ್ಯರಾದ ಶ್ರೀ ದಿವಾಕರ ರಾವ್ ಇವರು ದೀಪವನ್ನು ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕುಮಾರಿ ಅಂಕಿತಾರವರು ಪ್ರಾರ್ಥನೆಗೈದರು. ಸಂಘದ ಮಹಿಳಾ ವೇದಿಕೆ ಸದಸ್ಯರಾದ ಶ್ರೀಮತಿ ಸುನೀತಾ ಶ್ರೀಕಾಂತ್‌ರವರು ಸ್ವಾಗತಿಸಿದರು. ಶ್ರೀಮತಿ ಪರಿಮಳಾ ಪ್ರಶಾಂತ್ ರಾವ್‌ರವರು ಆಟಿ ತಿಂಗಳ ಮಹತ್ವವನ್ನು ತಿಳಿಸಿದರು. ಶ್ರೀ ವಾಸುದೇವ ಶಾನುಭೋಗ್‌ರವರು ತುಳುಗಾದೆಯ ಮಹತ್ವವನ್ನು ತಿಳಿಸಿದರು.

ನಂತರ ಮಹಿಳಾ ವೇದಿಕೆಯ ಸದಸ್ಯರಾದ ಶ್ರೀಮತಿ ಸುಧಾಮಣಿ, ಕುಮಾರಿ ಅರ್ಪಿತಾ ಹಾಗೂ ಕುಮಾರಿ ಸರ್ವಾಣಿ ಇವರು ಹಾಗೂ ಇತರ ವೇದಿಕೆಯ ಮಹಿಳಾ ಸದಸ್ಯರು ಸಮಾಜ ಬಾಂಧವರಿಗಾಗಿ ಅನೇಕ ಸ್ಪರ್ಧೆಗಳನ್ನು ನಡೆಸಿದ್ದು, ಈ ಸ್ಪರ್ಧೆಯಲ್ಲಿ ನಮ್ಮ ಸಂಘದ ಸದಸ್ಯರು ಹಾಗೂ ಪಡುಬಿದ್ರಿ ಸಂಘದ ಸದಸ್ಯರು ಮುಕ್ತವಾಗಿ ಬೆರೆತು ಭಾಗವಹಿಸಿದರು. ಎಲ್ಲಾ ಆಟಗಳು ಹಾಗೂ ಸ್ಪರ್ಧೆಗಳು ಎಲ್ಲರನ್ನೂ ರಂಜಿಸಿತು. ಸ್ಪರ್ಧೆ ಹಾಗೂ ಆಟಗಳಲ್ಲಿ ವಿಜೇತರಿಗೆ ಗುಲಾಬಿ ಸಸಿಗಳನ್ನಿತ್ತು ಗೌರವಿಸಿದರು. ಮಧ್ಯಾಹ್ನ ಭೋಜನದಲ್ಲಿ ಆಟಿ ತಿಂಗಳಲ್ಲಿ ತಯಾರಿಸುವ ಖಾದ್ಯಗಳನ್ನು ಶ್ರೀ ಪ್ರವೀಣ್ ಕುಮಾರ್ ಬಳಗದವರು ಬಡಿಸಿ ಸಹಕರಿಸಿದರು. ಈ "ಆಟಿಡೊಂಜಿ ದಿನ" ಕಾರ್ಯಕ್ರಮದ ಬಗ್ಗೆ ಪಡುಬಿದ್ರಿ ಸಂಘದ ಸದಸ್ಯರು ತಮ್ಮ ಅನಿಸಿಕೆಗಳನ್ನು ಹೇಳಿ ಸಂತೋಷಿಸಿದರು. ಕಾರ್ಯಕ್ರಮದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಘವೇಂದ್ರ ರಾವ್, ಶ್ರೀ ಶಿವಪ್ರಸಾದ್ ಶಾನುಭೋಗ್, ಶ್ರೀ ಎಮ್. ಸುಕುಮಾರ್, ಶ್ರೀ ಪ್ರವೀಣ್ ಕುಮಾರ್, ಶ್ರೀಮತಿ ಉಮಾ ಎಸ್. ಹಾಗೂ ಯುವ ವೇದಿಕೆಯ ಸದಸ್ಯರು ಮತ್ತು ಮಹಿಳಾ ವೇದಿಕೆಯ ಸದಸ್ಯರು ಭಾಗವಹಿಸಿದರು. ಶ್ರೀಮತಿ ಸುಕನ್ಯಾ ಹರಿಶ್ಚಂದ್ರ ರಾವ್ ಇವರು ಧನ್ಯವಾದ ಸಮರ್ಪಿಸಿದರು. ಶ್ರೀಮತಿ ಕ್ಷಮಾ ಹರಿನಾರಾಯಣ ರಾವ್ ನಿರೂಪಿಸಿದರು.

# ಬೆಳ್ತಂಗಡಿಯಲ್ಲಿ ಆಟಿಡೊಂಜಿ ದಿನ



ದಿನಾಂಕ 12.08.2018 ರಂದು ಬೆಳ್ತಂಗಡಿಯ ಲ್ಯಾಲದಲ್ಲಿರುವ ಶ್ರೀಮತಿ ರಾಜಶ್ರೀ ಮತ್ತು ಶ್ರೀ ಬಿ.ಕೆ.ಧನಂಜಯ ರಾವ್ ರವರ ಸ್ವಗೃಹ ಹರಿದ್ವಾರದಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಆಟಿಡೊಂಜಿ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿದ ಉದಯವಾಣಿ ವಾರ್ತಾ ಪತ್ರಿಕೆಯ ಸುದ್ದಿ ವಿಭಾಗದ ಮುಖ್ಯಸ್ಥರಾದ ಮನೋಹರ್ ಪ್ರಸಾದ್ ರವರು ತುಳು ನಾಡಿನ ಆಟಿ ತಿಂಗಳ ಎಲ್ಲಾ ಆಚರಣೆಗಳಿಗೂ ವೈಜ್ಞಾನಿಕ ಹಿನ್ನಲೆಯಿದೆ. ತುಳಸಿ, ಅಶ್ವಥ ಮರಗಳ ಪ್ರದಕ್ಷಿಣೆ ಮಾನವನ ದೇಹಕ್ಕೆ ಹೆಚ್ಚಿನ ಆಮ್ಲಜನಕ ಒದಗಿಸುವಿಕೆಗಾಗಿ ಹಿರಿಯರು ಅಳವಡಿಸಿದ ಆಚರಣೆಯಾಗಿದ್ದು ಆಟಿ ತಿಂಗಳಲ್ಲಿ ತುಳು ಜನರು ತಿನ್ನುವ ಆಹಾರ ಪದಾರ್ಥಗಳು ದೈಹಿಕ ಆರೋಗ್ಯಕ್ಕೆ ಪೂರಕವಾದುವು ಎಂದು ಹೇಳುತ್ತಾ ಅರ್ಥಪೂರ್ಣವಾಗಿ ಆಟಿ ಮಳೆಯ ಸಂದರ್ಭದಲ್ಲಿ ತುಳು ನಾಡಿನ ನೈಜ ಬದುಕಿನ ಚಿತ್ರಣವನ್ನು ನೀಡಿದ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಪದಾಧಿಕಾರಿಗಳನ್ನು ಅಭಿನಂದಿಸಿದರು ಮತ್ತು ಮಾನವನ ಸಂಬಂಧಗಳನ್ನು ಗಟ್ಟಿಗೊಳಿಸುವ ಆಚರಣೆಗಳನ್ನು ಉಳಿಸಿಕೊಳ್ಳುವಂತೆ ಎಲ್ಲರಿಗೂ ಕರೆ ನೀಡಿದರು. ಮುಖ್ಯ ಅತಿಥಿ ಸ್ಥಾನದಿಂದ ಇನ್ನ ಚಂದ್ರಕಾಂತ್ ರವರು ಯಾವುದೇ ಕೆಲಸಗಳನ್ನು ಮಾಡುವಾಗ ಶಿಸ್ತು, ಸಾಧನೆ ಇದ್ದಲ್ಲಿ ಸಾಧಿಸಲು ಅಸಾಧ್ಯವಾದುದು ಯಾವುದು ಇಲ್ಲ ಎಂದು ತನ್ನ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷರಾದ ದಿನೇಶ್ ಕುಮಾರ್.ಎಂ.ಎಸ್. ರವರು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಭ್ರಮಿಸಿ ಹಾಗೂ ಎಲ್ಲರೊಂದಿಗೆ ಕಲೆತು ಬದುಕನ್ನು ಸುಂದರವಾಗಿಸಿ ಎಂದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ವೇ। ಮೂ। ಜಗದೀಶ ಭಟ್ಟ ಭಟ್ರಪ್ಪಾಡಿ, ವೆಂಕಟೇಶ್ ಹೆಬ್ಬಾರ್‌ರವರನ್ನು ಸನ್ಮಾನಿಸಲಾಯಿತು. ಬಿ.ಕೆ.ಧನಂಜಯ ರಾವ್ ರವರು ಬಂದ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಪಿ.ರಾಧಾಕೃಷ್ಣ ರಾವ್ ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮವು ಉಜಿರೆ ವಲಯದ ಮಹಿಳೆಯರ ದೀಪನೃತ್ಯ ಹಾಗೂ ಅಮೃತ್ ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡು ಸಂಘದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ರಾವ್ ರವರ ಧನ್ಯವಾದದೊಂದಿಗೆ ಕೊನೆಗೊಂಡಿತು. ವೇದಿಕೆಯಲ್ಲಿ ಹಿರಿಯರಾದ ಬಿ.ಕೆ.ಸುಬ್ಬರಾವ್ ದಂಪತಿಗಳು, ರಾಜಾರಾಮ್ ರಾವ್, ಉಮೇಶ್ ರಾವ್ ಕೊಲ್ಲಿಪಾಲು, ಸುಮಂಗಲ ಪ್ರಶಾಂತ್, ಶಾಂತಾ ಸುರೇಶ್, ಅರುಣ್ ಕುಮಾರ್.ಎಂ.ಎಸ್., ಧನಂಜಯ ರಾವ್ ದಂಪತಿಗಳು, ಲಕ್ಷ್ಮೀನಾರಾಯಣ ರಾವ್, ದಿನೇಶ್ ಕುಮಾರ್.ಎಂ.ಎಸ್. ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಮಾರು 500 ರಿಂದ 600 ಸಭಿಕರು ಭಾಗವಹಿಸಿದರು. ಆಟಿ ತಿಂಗಳ ವಿಶಿಷ್ಟ ಆಹಾರ ಖಾದ್ಯಗಳು ಅತಿಥಿ ಅಭ್ಯಾಗತರ ಹಸಿವನ್ನು ತಣಿಸಿತು. ಸುಂದರ ಹೂವಿನ ರಂಗೋಲಿಗಳು, ಸಮರ್ಥ್ ಎಂಬ ಯುವಕನ ಸುಂದರ ತೈಲ ವರ್ಣ ಚಿತ್ರಗಳು, ವಿಶಿಷ್ಟ ತುಳುನಾಡ ಕೃಷಿಕರ ಪುರಾತನ ಪರಿಕರಗಳೊಂದಿಗೆ ಅಲಂಕೃತವಾಗಿದ್ದ ಬಂಗಾಡಿ-ಕಿಲ್ಲೂರು ರಂಗ ಚಾವಡಿ ವೇದಿಕೆ, ಭತ್ತದ ಕಣಜ, ಕುದುರೆಗಾಡಿ, ಕಂಬಳದ ಕೋಣಗಳು, ಮಡಿಕೆ ತಯಾರಿಸುವ ಪ್ರಾತ್ಯಕ್ಷಿಕೆ, ಆಟಿಕಳಂಜ ತೈಲವರ್ಣ ಎಲ್ಲರ ಮನಸ್ಸನ್ನು ಸೂರೆಗೊಂಡಿತು.

ವೇದಿಕೆಯಲ್ಲಿ ಬೆಳಿಗ್ಗೆ 11.00 ರಿಂದ ಸಾಯಂಕಾಲ 6.00 ರ ತನಕ ನಿರಂತರವಾಗಿ ಯಕ್ಷಗಾನ, ಬೆಳ್ತಂಗಡಿ, ಉಜಿರೆ, ಬಂಗಾಡಿ, ಧರ್ಮಸ್ಥಳ ಹಾಗೂ ನಾರಾವಿ ವಲಯದ ಸ್ಥಾನಿಕ ಬ್ರಾಹ್ಮಣ ಸಮಾಜದವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಆಗಮಿಸಿದ ಸರ್ವರನ್ನು ಮಂತ್ರಮುಗ್ಧಗೊಳಿಸಿತು. ಒಟ್ಟಿನಲ್ಲಿ ವರುಣನ ಆರ್ಭಟದ ನಡುವೆಯೂ ಆಟಿಡೊಂಜಿ ದಿನ ಮಳೆಯ ನೆನಪನ್ನು ಬರಿಸದಂತೆ ಎಲ್ಲರ ಮನಸೂರೆಗೊಂಡಿತು. ಕಾರ್ಯಕ್ರಮದ ಕೊನೆಯಲ್ಲಿ ಧನಂಜಯ ರಾವ್ ದಂಪತಿಗಳನ್ನು ಹಾಗೂ ಮಗ ಮಿಹಿರ್‌ನನ್ನು ಸನ್ಮಾನಿಸಲಾಯಿತು. ಸುಂದರ ಯಕ್ಷಗಾನದ ಮಂಗಳಗಾನದೊಂದಿಗೆ ಆಟಿಡೊಂಜಿ ದಿನ ಕಾರ್ಯಕ್ರಮ ಕೊನೆಗೊಂಡಿತು.

# ಹೀಗೊಂದು ಗುರುಶಿಷ್ಯ ಸಂವಾದ

**–ಅಪಯಶ, ಬೆಂಗಳೂರು**

(...ಹಿಂದಿನ ಸಂಚಿಕೆಯಿಂದ)

**ಶಿಷ್ಯನ ನಿವೇದನೆ :**

5) "ಗೋಳಾಟದ ಪರಿಸ್ಥಿತಿಯಲ್ಲಿ ಬರಲಿಲ್ಲ ಗುರುವೇ
ಬಾಟಲಿಯ ಒಡನಾಟ, ಕನಸಿನಲು ಭಯಪಡುವೆ.
ಹೋಟೆಲೂಟಕು ನನಗು, ಮೂರು ಕಿಲೋಮೀಟರ್ ದೂರವಿದೆ
ಬಳಲಾಟಗಳಿಗಂಜುವವನಲ್ಲ, ಹೇಗೋ ನಿಭಾಯಿಸುತ್ತಿರುವೆ.

6) ಎದೆಯಂತರಾಳದಲೊಂದು, ನವುರಾದ ಭಾವನೆಯ ಬೀಜ ಬಿರಿದು
ಮೊಳಕೆಯನೊಡೆದು, ಚಿಗುರೊಂದು ಮೂಡಿರಲು
ಎದುರಾದ ಪರಿಸ್ಥಿತಿಯು, ಬೆಳೆಯಲು ಬಿಡದೆ ಹೊಸಕಿರಲು
ಮುದುಡಿದುದು ಎಳೆಯಗಿಡ, ಉದುರಿ ನೆಲಕಚ್ಚಿಹುದು.

7) ಸಿಹಿಕಹಿಯ ನೆನಪುಗಳು, ಮರುಕಳಿಸಿ ಬಂದಿರಲು
ಕಹಿಯ ಖಿನ್ನತೆಯಲ್ಲು, ಸಿಹಿಯ ಸೆಲೆ ಉಕ್ಕಿರಲು
ಮಧುರತೆಯ ಪರಮಾನುಭವ, ಮನಸಿಗೆ ಪುಳಕ ತಂದಿರಲು
ಹರುಷದಲಿ ಅರೆಗಳಿಗೆ, ಮೈ ಮರೆತಿದ್ದೆ, ಗುರುವೇ

8) **ಗುರು ವಚನ :**
"ಅಪಯಶನೆ ನೀನೆನಗೆ, ಪ್ರಿಯಶಿಷ್ಯನಾಗಿರುವೆ.
ಪರಮಾಪ್ತನೆಂದೇ ನಿನ್ನ, ನಾನು ಪರಿಗಣಸಿರುವೆ.
ಕೊರೆಯುತಿಹ ಚಿಂತೆಯೇನೆಂದು ನನಗರುಹಿದರೆ
ಪರಾಮರ್ಶೆ ಮಾಡುವೆನು, ಪರಿಹಾರ ಸೂಚಿಸುವೆನು.

9) **ಶಿಷ್ಯನ ನಿವೇದನೆ :**
ಏನು ಹೇಳಲಿ ಗುರು ನನ್ನ, ಕತೆಗಳನು, ವ್ಯಥೆಗಳನು
ಏನೆಂದು ಬಣ್ಣಿಸಲಿ, ಪಟ್ಟಿರುವ ಬವಣೆಗಳನ್ನು
ತನುಮನವ ಅನವರತ ಕಾಡುವ ದುಃಖದುಗುಡಗಳನ್ನು
ಅನುಭವಿಸಿ ಸಾಕಾಯ್ತು, ಜೀವನದಿ ಪರಿತಾಪಗಳನ್ನು

10) ಬಾಲ್ಯದಲ್ಲಿ ಬಡತನದ, ಬವಣೆ ತಪ್ಪಿದ್ದಲ್ಲ
ಪ್ರೌಢತನದ ದುಡಿಮೆ, ಏನೇನೂ ಸಾಲುವುದಿಲ್ಲ
ಸಿರಿಯ ಸಂಪದವಿಲ್ಲ, ಹಿರಿತನದ ಪದವಿಗಳಿಲ್ಲ
ಉಸಿರಿಡಿದು ಬದುಕಲು ಬಿಡುವ, ಅವಕಾಶಗಳೇ ಇಲ್ಲ.

11) ಯಾರಿಗೋ ಕೈಮುಗಿದು, "ಜೀ ಹುಜೂರ್" ಎನ್ನುವುದು
ಯಾರಿಗೋ ಗಂಟಲು ಬಿರಿದು,"ಜೈ ಪರಾಕ್ ಕೂಗುವುದು
ಉಣ್ಣುವುದು ತಿನ್ನುವುದು, ಊರೂರು ಸುತ್ತುವುದು
ಗೊತ್ತುಗುರಿಯಿಲ್ಲದ ಬದುಕು, ಅಭಿಮಾನವಿರದ ಜೀವನವು.

12) ಎಂತೆಂಥ ಜನರೊಡನೆ, ಹೋರಾಟ ನಡೆಸಿರುವೆ
ಎಂತೆಂಥ ಸಂಕಟಗಳ, ನೆದುರಿಸಿಯು ಬದುಕಿರುವೆ
ಎಂತೆಂಥ ಪೀಕಲಾಟಗಳ, ಸಹಿಸಿ ಸುಸ್ತಾಗಿರುವೆ
ಅಂಥಾದರೂ ಎದೆಸೆಟೆದು, ತಲೆಯೆತ್ತಿ ನಿಂದಿರುವೆ

13) ಬಂಧುಗಳು ಬಳಲುವರೆಂದು, ಬೆಂಬಲಿಸಿ ನಿಂದಿಹೆನು
ನೊಂದವರ ಸಂತಯಿಸಿ, ಕಂಬನಿಯನೊರೆಸಿಹೆನು
ಇಂದೆನಗೆ ಸಂಕಟ ಬರಲು, ಬಂಧುಗಳೇನು ಮಾಡುವರು ?
ಕುಂದುಗಳ ತೋರುವರು, ನಿಂದನೆಯ ಗೈಯುವರು.

14) ಚಿಂತೆಗಳ ಕಂತೆಗಳ, ಜೊತೆ ಜೊತೆಯಾಗಿ ಬೆಳೆದಿರುವೆ
ಸಂತಸದ ಸಮಯವು ಮುಂದೆ ಬರಲಿದೆಯೆಂದು ಕಾದಿರುವೆ
ಅಂತಹ ದಿನಗಳಿನ್ನೂ ಬರದೆ, ಮರೀಚಿಕೆಗಳೇ ಕಾಣುತಿವೆ.
ಅಂತ್ಯದ ಕಾಲ ಸನಿಹವಿದೆ, ಅತಂಕನ ಮನೆ ಕರೆಯುತಿದೆ.

15) ಏನು ಮಾಡಿದೆನೆಂದು, ಈ ಜೀವಾವಧಿಯ ಶಿಕ್ಷೆ
ಯಾರ ಬೇಡಲಿ ನಾನು, ಬಿಡುಗಡೆಯ ಭಿಕ್ಷೆ
ಕತೆಯಲ್ಲ ಕೇಳಿದೆಯಲ್ಲ, ವ್ಯಥೆಯನ್ನು ಮುಗಿದಿಲ್ಲ
ಮರಣಕ್ಕಂಜುವನಲ್ಲ, ಕೊನೆಗದುವೆನಗೆ ಶ್ರೀ ರಕ್ಷೆ !

(ಮುಂದುವರೆಯುವುದು...)

## ನಿಧನ

### ಶ್ರೀ ಎನ್. ಪದ್ಮರಾಜ್



ಪಡುಬಿದ್ರೆಯಲ್ಲಿ ವಾಸವಾಗಿದ್ದ ಶ್ರೀ ಎನ್. ಪದ್ಮರಾಜ್ ಇವರು ತಾ.14.08.2018ರಂದು ಅಲ್ಪಕಾಲದ ಅಸೌಖ್ಯದಿಂದ ನಿಧನ ಹೊಂದಿದರು. ಶ್ರೀಯುತರು ಈ ಮುಂಚೆ ಹುಬ್ಬಳ್ಳಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ನಮ್ಮವರನ್ನು ಸಂಘಟಿಸಿದ್ದರು. ಅಲ್ಲಿ ತಾಂತ್ರಿಕ ವಿದ್ಯಾಲಯದ ಪ್ರಾಂಶುಪಾಲರಾಗಿ ನಿವೃತ್ತರಾದ ಬಳಿಕ ಪಡುಬಿದ್ರೆಯಲ್ಲಿ ನೆಲೆಸಿದ್ದರು. ಶ್ರೀ ಶಾರದಾ ಪತ್ರಿಕೆಯ ಅಭಿಮಾನಿಗಳಾಗಿದ್ದ ಅವರು ಪತ್ರಿಕೆಗೆ ಲೇಖನಗಳನ್ನೂ ಒದಗಿಸಿದ್ದರು.

★★★★ ★★★★

### ಶ್ರೀ ಸುಬ್ರಹ್ಮಣ್ಯ ರಾವ್



ಕುಕ್ಕಿಕಟ್ಟೆಯ ನಿವಾಸಿ ಶ್ರೀ ಸುಬ್ರಹ್ಮಣ್ಯ ರಾವ್ ಇವರು ಅಲ್ಪಕಾಲದ ಅಸೌಖ್ಯದಿಂದ ತಾ.14.08.2018ರಂದು ನಿಧನ ಹೊಂದಿದರು.

★★★★ ★★★★

### ಶ್ರೀ ಬಿ. ಕೃಷ್ಣ ರಾವ್

ಉಡುಪಿ ಕೊಳಂಬೆಯ ನಿವಾಸಿ ಬಿ. ಕೃಷ್ಣ ರಾವ್ ಇವರು ಅಲ್ಪಕಾಲದ ಅಸೌಖ್ಯದಿಂದ ತಾ.29.08.2018ರಂದು ನಿಧನ ಹೊಂದಿದರು.

★★★★ ★★★★

### ಶ್ರೀಮತಿ ಇಂದಿರಾ ಬಿ. ರಾವ್



ಮುದರಂಗಡಿಯ ಡಾ। ಬಾಲಕೃಷ್ಣ ರಾವ್ ಇವರ ಧರ್ಮಪತ್ನಿ ಶ್ರೀಮತಿ ಇಂದಿರಾ ಬಿ. ರಾವ್ ರವರು ತಾ.31.08.2018ರಂದು ನಿಧನ ಹೊಂದಿದರು.

★★★★ ★★★★

### ಶ್ರೀ ಕೆ. ಲಕ್ಷ್ಮೀನಾರಾಯಣ ರಾವ್

ಇಂದ್ರಾಪುರದಲ್ಲಿ ವಾಸಿಸುತ್ತಿದ್ದ ಹೋಟೆಲ್ ಉದ್ಯಮಿ ಶ್ರೀ ಕೆ.ಲಕ್ಷ್ಮೀನಾರಾಯಣ ರಾವ್ (ದಿ। ಕಟಪಾಡಿ ರಾಮಚಂದ್ರಯ್ಯ ಹಾಗೂ ಸರಸ್ವತಮ್ಮನವರ ಪುತ್ರ) ಇವರು 03.08.2018 ರಂದು ನಿಧನ ಹೊಂದಿದರು ಇವರಿಗೆ 79 ವರ್ಷ ಪ್ರಾಯವಾಗಿತ್ತು. ಕೊಡುಗೈದಾನಿಗಳಾಗಿ ನಮ್ಮ ಸಮಾಜದಲ್ಲಿ ಜನಾನುರಾಗಿಗಳಾಗಿದ್ದರು.

## ಬ್ರಹ್ಮೋಪದೇಶ

### ಚಿ। ವಿವಾಂಶ್

ಉಡುಪಿ ಇಂದ್ರಾಳಿಯಲ್ಲಿರುವ ಶ್ರೀಮತಿ ಮತ್ತು ಶ್ರೀ ವೈ. ಮುರಲಿಕೃಷ್ಣರಾಯರ ಪುತ್ರ ಚಿ। ಅನೂಪ್ ಹಾಗೂ ಚಿ. ಸೌ. ಹರ್ಷಿತಾ ದಂಪತಿಗಳು ತಮ್ಮ ಪುತ್ರ 'ವಿವಾಂಶ್'ನ ನಾಮಕರಣವನ್ನು 26–8–2018ರಂದು ವಾಮಂಜೂರಿನ ಶ್ರೀ ರಾಮ ಭಜನಾ ಮಂದಿರದಲ್ಲಿ ಬಂಧುಬಾಂಧವರು ಹಾಗೂ ಮಿತ್ರರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು. ಹಾಗೂ 24–6–2018 ರಂದು ಶ್ರೀಮತಿ ಸುಮತಿಗೋಪಾಲ್ ರಾವ್ ವೈ, ತಮ್ಮ ಮರಿಮೊಮ್ಮಗನನ್ನು ಬಂಗಾರದ ದೀಪದ ಬೆಳಕಿನಲ್ಲಿ ನೋಡುವ ಕಾರ್ಯಕ್ರಮವು ವಾಮಂಜೂರಿನ ಮನೆಯಲ್ಲಿ, ಶ್ರೀಮತಿ ಹರಿಣಾಕ್ಷಿ ಮತ್ತು ಶ್ರೀ ಪ್ರಶಾಂತ್ ರಾವ್, ಇವರ ನೇತೃತ್ವದಲ್ಲಿ ಸಡಗರದಿಂದ ಜರುಗಿತು.

## ಕವನ

### ಹಿಡಿತ

ಪರಿಸ್ಥಿತಿಯ ಮೇಲೆ
ಮನಸ್ಥಿತಿಯ ಹಿಡಿತ
ನೀ ಏರೋ ಎತ್ತರಕೆ
ಇನ್ಯಾರ ಹೊಡೆತ?
ಹಿಡಿತದ ಸ್ಥಿತಿ
ಗತಿ ಬದಲಾದಲ್ಲಿ
ಕನಸು ಕೆಸರಾಗಿ
ತಳ ಸೇರುವುದು ಖಚಿತ

### ಗುರಿ

ನಿಮ್ಮ ನಿಂದಿಸಿದ
ಟೀಕಿಸಿದ, ನೋಯಿಸಿದ
ಅವರ ಮೇಲೆ ನಿಮಗೇಕೆ ಸಿಟ್ಟು?
ಒಮ್ಮೆ ಯೋಚಿಸಿ,
ಮರೆತು ಬಿಡಿ
ಏಳಿ ಎದ್ದೇಳಿ
ಗುರಿ ಮುಟ್ಟುವ
ತನಕ ನಿಲ್ಲದಿರಿ
ನರೇಂದ್ರರ ವಾಣಿ
ಮರೆಯದಿರಿ

### ಇತಿಮಿತಿ

ಮಿತಿಯಲ್ಲಿದ್ದರೆ ಅನುಕೂಲಕರ !

ನಮ್ಮ ಮಾತು, ನಮ್ಮ ಸಂಪತ್ತು
ನಮ್ಮ ವರ್ತನೆ, ನಮ್ಮ ಸಂಬಂಧ
ಅತಿಯಾದಲ್ಲಿ ಪ್ರತಿಕೂಲಕರ !!

ಇದೇ ಸಂತರು ಪ್ರತಿಪಾದಿಸಿದ ಜೀವನ ಸಾರ !!!

### ಸ್ವಾಗತ

ಸುಖಕ್ಕೆ ಕೈ ಚಾಚುತ್ತಾ ಚಾಚುತ್ತಾ !
ನಮಗೇ ಅರಿವಿಲ್ಲದಂತೆ ದುಃಖವನ್ನು
ಬರಮಾಡಿಕೊಳ್ಳುವ ಪರಿ !!

### ಆಸೆ

ಆಸೆಯೇ ಬದುಕು
ನಿರಾಸೆಯೇ ಕತ್ತಲೆ
ಈ ಆಸೆ, ನಿರಾಸೆಗಳ ಮಧ್ಯೆ ಹೊಯ್ದಾಡುತ್ತಲೇ ಇದೆ...!
ಜೀವನ ನಿತ್ಯ ನಿರಂತರ ತಮಾಷೆಯಾಗಿ...!!

–ಮಹೇಶ್ ನಿಟಿಲಾಪುರ


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**
ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ
ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**
ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363


## ಶುಭ ವಿವಾಹ

ಶ್ರೀಮತಿ ವೇದಾಂಬ ಮತ್ತು ಕೀರ್ತಿಶೇಷ ಮಲ್ಲಮಾರು ರಾಮಕೃಷ್ಣ ಶಾನುಭೋಗ್ ಇವರ ಪುತ್ರ **ಚಿ। ರೋಹಿತ್** ಇವರ ವಿವಾಹವು ಶ್ರೀಮತಿ ಸಪ್ನಾ ಮತ್ತು ಶ್ರೀ ದಿನಕರ ರಾವ್ ಇವರ ಪುತ್ರಿ **ಚಿ। ಸೌ। ದಿಶಾ** ಇವರೊಂದಿಗೆ ದಿನಾಂಕ 24–08–2018 ರಂದು ಮಂಗಳೂರು ಸಂಘ ನಿಕೇತನ ಕಲ್ಯಾಣ ಮಂಟಪದಲ್ಲಿ ಜರುಗಿತು.

★★★★ ★★★★

ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಬಿ. ಸತ್ಯನಾರಾಯಣ ರಾವ್ ಪರಪ್ಪಕರಿಯ ಪೆರ್ಲ ಇವರ ಪುತ್ರ **ಚಿ। ಫಲ್ಗುಣ** ಇವರ ವಿವಾಹವು ನಂದಳಿಕೆ ಬಡಗುಮನೆ ಶ್ರೀಮತಿ ಮತ್ತು ಶ್ರೀ ಭವಾನಿಶಂಕರರಾವ್ ಇವರ ಪುತ್ರಿ **ಚಿ। ಸೌ। ಶ್ವೇತಾ** ಇವರೊಂದಿಗೆ ದಿನಾಂಕ 26–08–2018 ರಂದು ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಳದ ಸಭಾಭವನದಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಶಕುಂತಳ ಪಿ ಮತ್ತು ಶ್ರೀ ಎಮ್.ಪಿ. ಕೃಷ್ಣರಾವ್ ಇವರ ಪುತ್ರ **ಚಿ। ಆನಂದ್** ಇವರ ವಿವಾಹವು ಶ್ರೀಮತಿ ಮತ್ತು ಶ್ರೀ ಸತೀಶ್ ರಾವ್ ಇವರ ಸುಪುತ್ರಿ **ಚಿ। ಸೌ। ರಜನಿ** ಇವರೊಂದಿಗೆ ದಿನಾಂಕ 29–08–2018 ರಂದು ಎರ್ಮಾಳು ಶ್ರೀ ಜನಾರ್ಧನ ಜನ ಕಲ್ಯಾಣ ಸಭಾಂಗಣದಲ್ಲಿ ಜರುಗಿತು.

★★★★ ★★★★

ಶ್ರೀಮತಿ ನಿವೇದಿತಾ ಮತ್ತು ಶ್ರೀ ವೈ. ಪ್ರದೀಪ್ ಕುಮಾರ್ ಇವರ ಪುತ್ರ **ಚಿ। ಮನೋಜ** ಇವರ ವಿವಾಹವು ಪಾಂಡವಪುರ ಶ್ರೀಮತಿ ವೀಣಾ ಮತ್ತು ಶ್ರೀ ಪಶುಪತಿ ಶರ್ಮ ಇವರ ಪುತ್ರಿ **ಚಿ। ಸೌ। ಮಧುವನಿ** ಇವರೊಂದಿಗೆ ದಿನಾಂಕ 30–08–2018 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಪ್ರಫುಲ್ಲ ಮತ್ತು ಶ್ರೀ ಕೆ. ನವೀನಚಂದ್ರ ರಾವ್ ಇವರ ಪುತ್ರ **ಚಿ। ನಿತಿನ್** ಇವರ ವಿವಾಹವು ಶ್ರೀಮತಿ ನಾಮಗಿರಿ ಆರ್ ಮತ್ತು ಶ್ರೀ ಎಚ್.ಎಸ್. ನರಸಿಂಹ ಪ್ರಸಾದ್ ಇವರ ಪುತ್ರಿ **ಚಿ। ಸೌ। ಬಿಂದುಶ್ರೀ** ಇವರೊಂದಿಗೆ ದಿನಾಂಕ 31–08–2018 ರಂದು ಸಿಂಧೂರ ಕನ್ವೆಂಷನ್ ಹಾಲ್ ವಿಶ್ವೇಶ್ವರನಗರ ಮೈಸೂರು ಇಲ್ಲಿ ನೆರವೇರಿತು.

## ಶುಭಜನನ

ಶ್ರೀಮತಿ ಅನುಪಮ ಹಾಗೂ ಶ್ರೀ ನಾಗೇಶ್ ಭಟ್ ಯಳಂತೂರು ಬೆಳ್ವೆ ಇವರಿಗೆ ದಿನಾಂಕ 10.07.2018ರಂದು ಗಂಡು ಮಗು ಜನನ

★★★★ ★★★★

ಶ್ರೀಮತಿ ಕೀರ್ತನ ಹಾಗೂ ಶ್ರೀ ವಿಶ್ವನಾಥ ಎಮ್ ಮಂಗಳೂರು ಇವರಿಗೆ ದಿನಾಂಕ 01.09.2018ರಂದು ಗಂಡು ಮಗು ಜನನ.

★★★★ ★★★★

ಶ್ರೀಮತಿ ಜಯಶ್ರೀ ಹಾಗೂ ತಲೇಕಿ ಕೃಷ್ಣರಾಜ ಕಡಬ ಇವರಿಗೆ ದಿನಾಂಕ 17.08.2018ರಂದು ಗಂಡು ಮಗು ಜನನ.

## ಷಷ್ಟ್ಯಬ್ಧಿಶಾಂತಿ

ಕಟಪಾಡಿ ಮೂಡುಬೆಟ್ಟುವಿನ ಹರಿದಾಸರಾವ್ ಇವರು 60 ಸಂವತ್ಸರಗಳು ಪೂರ್ತಿಯಾದ ಶುಭ ಸಂದರ್ಭವನ್ನು ಪತ್ನಿ ಶ್ರೀಮತಿ ಭಾರ್ಗವಿ ಇವರೊಂದಿಗೆ ಕಟಪಾಡಿ ಮೂಡುಬೆಟ್ಟು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ಸನ್ನಿಧಿಯಲ್ಲಿ ಪುತ್ರರು ಸಹೋದರರು, ಸಹೋದರಿಯರು ಹಾಗೂ ಕುಟುಂಬಸ್ಥರೊಂದಿಗೆ ಷಷ್ಟ್ಯಬ್ಧಿಶಾಂತಿಯನ್ನು ನೆರವೇರಿಸಿ ಆಚರಿಸಿದರು.


ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894


ಎಮ್. ದೇವಾನಂದ್ ಭಟ್ Cell : 9845644556 9483913344
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.28-09-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.17-09-2018 ಮತ್ತು ತಾ.14-10-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-09-2018 ಮತ್ತು ತಾ.13-10-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮನವಿ

**ಹೆಬ್ರಿ ತಾಲೂಕಿನ ಕಬ್ಬಿನಾಲೆಯಲ್ಲಿ ವಾಸಿಸುತ್ತಿದ್ದು ಅಡುಗೆ ವೃತ್ತಿಯನ್ನು ನಡೆಸುತ್ತಿದ್ದ ಶ್ರೀ ರಾಘವೇಂದ್ರರವರು ತಲೆಗೆ ಗಂಭೀರ ಗಾಯಗೊಂಡ ಪರಿಣಾಮ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯಲ್ಲಿ ಹಾಗೂ ಉಡುಪಿಯ ಆದರ್ಶ್ ಆಸ್ಪತ್ರೆಯಲ್ಲಿ ಎರಡೆರಡು ಬಾರಿ ಚಿಕಿತ್ಸೆ ಪಡೆದು ಸುಮಾರು 6,00,000/– ರೂ ವೆಚ್ಚವಾಗಿರುತ್ತದೆ. ಆದರೂ ಸಹ ಅವರ ಆರೋಗ್ಯ ಸ್ಥಿತಿ ಅತೀ ಕೆಟ್ಟದಾಗಿದ್ದು ವೃತ್ತಿಯಲ್ಲಿ ಮುಂದುವರೆಯಲು ಅಸಾಧ್ಯವಾಗಿರುತ್ತದೆ. ಹಾಗಾಗಿ ಕುಟುಂಬದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುತ್ತದೆ.**

**ಈ ಹಿನ್ನೆಲೆಯಲ್ಲಿ ಸಜ್ಜನ ಮಹನೀಯರಾದ ತಾವು ಈ ನತದೃಷ್ಟ ಬ್ರಾಹ್ಮಣನ ಮೇಲೆ ದಯೆತೋರಿ ಯಥಾಶಕ್ತಿ, ಆರ್ಥಿಕ ನೆರವು ನೀಡಿ ದೊಡ್ಡ ಉಪಕಾರ ಮಾಡಬೇಕೆಂದು ನಮ್ರವಾಗಿ ಪ್ರಾರ್ಥಿಸುತ್ತೇವೆ.**

**ಶ್ರೀ ರಾಘವೇಂದ್ರ–ಗೋಪಾಲಕೃಷ್ಣರವರ ಮಗ, ಕುಡುಮಣ್ಣ ಮನೆ, ಕಬ್ಬಿನಾಲೆ, ಹೆಬ್ರಿ, ಉಡುಪಿ ಜಿಲ್ಲೆ.**

ಬ್ಯಾಂಕ್ ಖಾತೆಯ ವಿವರ :

ಹೆಸರು : ರಾಘವೇಂದ್ರ

**ಬ್ಯಾಂಕ್ : ಸಿಂಡಿಕೇಟ್ ಬ್ಯಾಂಕ್ ಹೆಬ್ರಿ ಉಳಿತಾಯ ಖಾತೆ ನಂಬ್ರ 01262200057992,**

ಐಎಫೆಸ್‌ಸಿ ನಂಬ್ರ : SYNB000126

## ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3–68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ–575019. ಮೊ : 8762235801.**

2017–18ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 21–10–2018 ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 30–09–2018ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**–ಕೆ. ಸದಾಶಿವ ಶಾಸ್ತ್ರಿ**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2018-19ನೇ ಸಾಲಿನ ದಿ। ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ। ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-09-2018**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ। ವೈ.ಸುದರ್ಶನರಾವ್,**

**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಸ್ಟ್ಯಾಂಡ್ ಬಳಿ, ಉಡುಪಿ-576101**

## ಶ್ರೀಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2018-19

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.30-09-2018ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.**

**ಚೆಕ್‌ನ್ನು ವಿಜಯದಶಮಿಯಂದು ವಿತರಿಸಲಾಗುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ 2018-19

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2018-2019**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ನಿಗದಿತ ಅರ್ಜಿ ಫಾರಂನ್ನು** ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಸಂಘದ ವಿಳಾಸಕ್ಕೆ **ತಾ.30-09-2018**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2018-19

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.30-09-2018**ರೊಳಗೆ **ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಉದಯಚಂದ್ರ ಪ್ರತಿಭಾ ಪುರಸ್ಕಾರ 2018-19

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2017-18ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.30-09-2018**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

## ಕನ್ಯಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 17–09–2018 | ಕನ್ಯಾ ಸಂಕ್ರಮಣ | 10–10–2018 | ಆಶ್ವೀಜ ಮಾಸ ಶುಕ್ಲಪಕ್ಷಾರಂಭ ಶರನ್ನವರಾತ್ರಿ ಆರಂಭ |
| 20–09–2018 | ಸರ್ವೈಕಾದಶಿ | 14–10–2018 | ಶಾರದಾ ಪೂಜಾರಂಭ |
| 23–09–2018 | ಅನಂತನ ಚತುರ್ದಶಿ | 17–10–2018 | ತುಲಾ ಸಂಕ್ರಮಣ, ದುರ್ಗಾಷ್ಟಮಿ |
| 25–09–2018 | ಹುಣ್ಣಿಮೆ | 18–10–2018 | ಮಹಾನವಮಿ, ಶಾರದಾ ವಿಸರ್ಜನಂ |
| 26–09–2018 | ಭಾದ್ರಪದ ಮಾಸ ಕೃಷ್ಣಾಪಕ್ಷಾರಂಭ ಮಹಾಲಯ ಪಕ್ಷಾರಂಭ | 19–10–2018 | ವಿಜಯದಶಮಿ ಶಾರದಾ ಮಂಟಪದಲ್ಲಿ ಚಂಡಿಕಾ ಹೋಮ |
| 28–09–2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.56 | | |
| 05–10–2018 | ಸರ್ವೈಕಾದಶಿ | | |
| 09–10–2018 | ಮಹಾಲಯ ಅಮಾವಾಸ್ಯೆ | | |

## ಶಾರದಾ ಮಂಟಪದಲ್ಲಿ ವರಮಹಾಲಕ್ಷ್ಮೀ ವ್ರತ



ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ದಲ್ಲಿ ಮಹಿಳಾ ವೇದಿಕೆಯ ಸಹಯೋಗದೊಂದಿಗೆ ಶ್ರೀ ಶಾರದಾ ಮಂಟಪದಲ್ಲಿ ದಿನಾಂಕ 24-08-2018ರಂದು ಸಂಜೆ 5.00 ಗಂಟೆಯಿಂದ ವರಮಹಾಲಕ್ಷ್ಮೀವ್ರತ ಪೂಜೆಯು ಸಂಪನ್ನಗೊಂಡಿತು. ತಲಪಾಡಿ ಸುಬ್ರಹ್ಮಣ್ಯ ಭಟ್ ಹಾಗೂ ಪಾವಂಜೆ ಸುಬ್ರಹ್ಮಣ್ಯಭಟ್ ಇವರ ಪೌರೋಹಿತ್ಯದಲ್ಲಿ ಶ್ರೀ ಬೆಳ್ಮಣ್ಣು ಸುರೇಶ್ ಶ್ಯಾನುಭಾಗ್ ಹಾಗೂ ಶ್ರೀಮತಿ ಅನುರಾಧಾ ದಂಪತಿಗಳ ಕತೃತ್ವದಲ್ಲಿ ಸುಮಾರು 300ಕ್ಕಿಂತಲೂ ಹೆಚ್ಚು ಭಕ್ತಾದಿಗಳು ಭಾಗವಹಿಸಿದ್ದು, ಮಹಿಳೆಯರಿಂದ ಭಜನೆ, ಲಲಿತಾಸಹಸ್ರನಾಮ ಪಠಣ ನೆರವೇರಿತು. ಕೊನೆಯಲ್ಲಿ ತೀರ್ಥಪ್ರಸಾದದ ನಂತರ ಲಘು ಉಪಾಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

## ಶಾರದಾ ಮಂಟಪದಲ್ಲಿ ಋಗುಪಾಕರ್ಮ



ದಿನಾಂಕ 25-08-2018ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಇದರ ಆಶ್ರಯದಲ್ಲಿ ವರ್ಷಂಪ್ರತಿಯಂತೆ ಋಗುಪಾಕರ್ಮವು ನೆರವೇರಿತು. ಶ್ರೀ ಪಾವಂಜೆ ರವಿ ಭಟ್ ಹಾಗೂ ಶ್ರೀ ನಾಗರಾಜ ಭಟ್ ಇವರ ಪೌರೋಹಿತ್ಯದಲ್ಲಿ ನಡೆದಿದ್ದು, ಹೋಮಾದಿ ಧಾರ್ಮಿಕ ವಿಧಿಗಳಿಗೆ ಕತೃಗಳಾಗಿ ಶ್ರೀ ಜಿ ಕೆ ಕೋಲ್ವೆ ಉಡುಪಿಯವರು ಸಹಕರಿಸಿದರು. ಸುಮಾರು 125ಕ್ಕಿಂತಲೂ ಹೆಚ್ಚು ಸಮಾಜ ಬಾಂಧವರು ಉಪಾಕರ್ಮದಲ್ಲಿ ಭಾಗವಹಿದ್ದು, ಮಧ್ಯಾಹ್ನ ಬ್ರಾಹಣ ಸುಹಾಸಿನೀ ಆರಾಧನೆಯೂ ನೆರವೇರಿತು.

## ಹಾರ್ದಿಕ ಅಭಿನಂದನೆಗಳು



**ಶ್ರೀ ಮಂಜುನಾಥ ಹೆಬ್ಬಾರ್**
ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ



**ಶ್ರೀಮತಿ ರಜನಿ ಹೆಬ್ಬಾರ್**
ನಗರಸಭಾ ಸದಸ್ಯೆ, ಒಳಕಾಡು ವಾರ್ಡ್, ಉಡುಪಿ ನಗರಸಭೆ

ಕಬ್ಬಿನಾಲೆಯ ಕುಗ್ರಾಮದಿಂದ ಆರಂಭಿಸಿ, ಸ್ವಪರಿಶ್ರಮದಿಂದ ಇಂದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿರುವ ನಿಮಗೆ ಹಾರ್ದಿಕ ಅಭಿನಂದನೆಗಳು

**ಶ್ರೀ ಗಣೇಶ್ ಹೆಬ್ಬಾರ್ ಹಾಗೂ ಕಬ್ಬಿನಾಲೆ ಕುಟುಂಬಸ್ಥರು**
**ಹಾಗೂ ಬಂಧುಮಿತ್ರರು**

With Best Compliments From :

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

## ಶಾರದಾ ದೇವಸ್ಥಾನದಲ್ಲಿ ನಾಗರಪಂಚಮಿ



ಆಗಸ್ಟ್ 15ರಂದು ನಾಗರ ಪಂಚಮಿ. ಹಬ್ಬಗಳ ಸರಣಿಯಲ್ಲಿ ಮೊದಲ ಹಬ್ಬವಾದ ಈ ಹಬ್ಬಕ್ಕೆ ಹಿಂದಿನ ಆದಿತ್ಯವಾರವೇ ಶ್ರೀ ಶಾರದಾಮಂಟಪದ ಪರಿಸರವನ್ನು ಶ್ರಮದಾನದ ಮೂಲಕ ಸ್ವಚ್ಚಗೊಳಿಸುವುದರೊಂದಿಗೆ ಸಿದ್ದತೆ ನಡೆಸಲಾಗಿತ್ತು. ನೂತನ ಆಡಳಿತಮಂಡಳಿಗೆ ಇದು ಮೊದಲ ಕಾರ್ಯಕ್ರಮ.ಬೆಳಿಗ್ಗೆ ದೇವಸ್ಥಾನದ ಹಿಂಬದಿಯಲ್ಲಿರುವ ನಾಗದೇವರ ಗುಡಿಯಲ್ಲಿ ಸುಮಾರು ಹತ್ತುಗಂಟೆಗೆ ಅರ್ಚಕರಾದ ಶ್ರೀ ಧರಣೀಶ ಭಟ್ಟರ ಉಸ್ತುವಾರಿಯಲ್ಲಿ ತನುಸೇವೆ ಪಂಚಾಮೃತ ಅಭಿಷೇಕ ಇತ್ಯಾದಿ ಸೇವೆಗಳನ್ನು ಸಮರ್ಪಿಸಲಾಯಿತು. ಸಂಘದ ನೂತನ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ರವರು ಸಮಸ್ತ ಸ್ಥಾನಿಕ ಸಮಾಜಬಾಂಧವರ ಶ್ರೇಯೋಭಿವೃದ್ಧಿಗಾಗಿ ನಾಗದೇವರಿಗೆ ಸಂಘದ ವತಿಯಿಂದ ತನುಸೇವೆ ಸಮರ್ಪಿಸಿ ಪ್ರಾರ್ಥಿಸಿದರು. ಸಂಘದ ಪದಾಧಿಕಾರಿಗಳು ಹಾಗೂ ಸುಮಾರು ನೂರಕ್ಕೂ ಮಿಕ್ಕಿ ಸಮಾಜಬಾಂಧವರು, ಭಕ್ತರು ತನುಸೇವೆ ಸಮರ್ಪಿಸಿದರು. ಶ್ರೀ ಶಾರದಾ ದೇವಸ್ಥಾನದಲ್ಲಿ ವಿಶೇಷ ಮಹಾಪೂಜೆ ನೆರವೇರಿತು.

## ಸಮಾಜದ ಹಿರಿಯರಿಗೆ ಗೌರವಾರ್ಪಣೆ





ಉಡುಪಿ ಪರಿಸರದ ನಮ್ಮ ಸಮಾಜದ ಸಮಾನಮನಸ್ಕ ಹಿರಿಯ ಕಿರಿಯ ಬಂಧುಗಳು ಮಿತ್ರವೃಂದವೆಂಬ ಹೆಸರಿನಲ್ಲಿ ಪ್ರತೀ ವರ್ಷ ಸ್ವಾತಂತ್ರ್ಯ ಹಾಗೂ ಗಣರಾಜ್ಯೋತ್ಸವ ದಿನದಂದು ನಮ್ಮ ಸಮಾಜದ ಹಿರಿಯರ ನಿವಾಸಕ್ಕೆ ತೆರಳಿ ಸನ್ಮಾನಿಸಿ ಆಶೀರ್ವಾದ ಪಡೆಯುವ ಕಾರ್ಯಕ್ರಮವನ್ನು ಹಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಈ ಸ್ವಾತಂತ್ರ್ಯ ದಿವಸದಂದು ಶ್ರೀ ಬೆಳ್ಮಣ್ಣು ವಾಸುದೇವರಾಯರನ್ನು ಹಾಗೂ ಶ್ರೀ ತಂತ್ರಾಡಿ ಸದಾಶಿವ ಎಂ. ರಾವ್‌ರವರನ್ನು ಸನ್ಮಾನಿಸಲಾಯಿತು.

ಶ್ರೀ ಬೆಳ್ಮಣ್ಣು ವಾಸುದೇವರಾಯರು ಮೂಲತಃ ಬೆಳ್ಮಣ್ಣಿನವರಾಗಿ ಸಾಂಗ್ಲಿಯಲ್ಲಿ ಹೋಟೆಲು ಉದ್ಯಮದಲ್ಲಿ ಯಶಸ್ಸನ್ನು ಕಂಡವರು. ನಂತರ ಉಡುಪಿಯ ಇಂದ್ರಾಳಿಯಲ್ಲಿ ನೆಲೆಸಿ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಭಾಗವಹಿಸುತ್ತಾ ಹಾಗೂ ಸಲಹೆಗಾರರಾಗಿ ಮಾರ್ಗದರ್ಶನ ಮಾಡುತ್ತಾ ಚಿರಪರಿಚಿತರಾಗಿದ್ದಾರೆ. ಶ್ರೀ ಶಾರದಾ ದೇವಸ್ಥಾನ ವೇದಿಕೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಇವರನ್ನು ಅವರ ನಿವಾಸದಲ್ಲಿ ಅವರ ಪತ್ನಿ ಶ್ರೀಮತಿ ತುಳಸಿಯವರ ಜೊತೆ ಶಾಲು ಹೊದಿಸಿ, ಪೇಟ ತೊಡಿಸಿ, ಫಲಪುಷ್ಪ ಸ್ಮರಣಿಕೆಗಳೊಂದಿಗೆ ಗೌರವಿಸಿ ಆಶೀರ್ವಾದ ಪಡೆಯಲಾಯಿತು. ಶ್ರೀಮತಿ ತುಳಸಿಯವರಿಗೆ ಸೀರೆ ಪುಷ್ಪವಿತ್ತು ಆಶೀರ್ವಾದ ಪಡೆಯಲಾಯಿತು.

ಶ್ರೀ ಎಸ್.ಎಂ. ರಾಯರು ಇಂಜನಿಯರಿಂಗ್ ಪದವೀಧರರು. ಬಿ.ಎಸ್.ಎನ್.ಎಲ್. ಕಂಪನಿಯಲ್ಲಿ ಜನರಲ್ ಮ್ಯಾನೇಜರ್ ಹುದ್ದೆಯಲ್ಲಿ ನಿವೃತ್ತರಾದವರು. ಪ್ರಗತಿಪರ ಕೃಷಿಕರಾದ ಇವರು ಶ್ರಮಜೀವಿ. ಸಂಘದ ಉಪಾಧ್ಯಕ್ಷರಾಗಿ ಹಲವಾರು ವರ್ಷಗಳು ಸೇವೆ ಸಲ್ಲಿಸಿದ್ದಾರೆ. ಇವರನ್ನು ಅವರ ಇಂದ್ರಾಳಿಯ ನಿವಾಸದಲ್ಲಿ ಅವರ ಪತ್ನಿ ಶ್ರೀಮತಿ ವಸಂತಿಯವರ ಜೊತೆ ಶಾಲು ಹೊದಿಸಿ, ಪೇಟತೊಡಿಸಿ, ಫಲಪುಷ್ಪ ಸ್ಮರಣಿಕೆಗಳೊಂದಿಗೆ ಗೌರವಿಸಿ ಆಶೀರ್ವಾದ ಪಡೆಯಲಾಯಿತು. ಶ್ರಿಮತಿ ವಸಂತಿಯವರಿಗೆ ಸೀರೆ ಪುಷ್ಪವಿತ್ತು ಆಶೀರ್ವಾದ ಪಡೆಯಲಾಯಿತು. ಸನ್ಮಾನಿತರಿಬ್ಬರೂ ಮಿತ್ರವೃಂದದ ಸದಸ್ಯರಿಗೆ ಆತಿಥ್ಯವನ್ನಿತ್ತು ಸತ್ಕರಿಸಿದರು. ಶ್ರೀ ಎಂ. ಪಾಲಚಂದ್ರರಾಯರು ಜೊತೆಗಿದ್ದು ಸನ್ಮಾನಿತರನ್ನು ಅಭಿನಂದಿಸಿದರು.


*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)




## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | |
|---|---|
| ವಾಹನ ಸಾಲ | : 12.5% |
| ಹಳೆಯ ವಾಹನ | : 14% |
| ಆಭರಣ ಸಾಲ | : 12.5% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org